
ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 4 । ಸಂಚಿಕೆ : 7 । ಜುಲೈ 2022 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ



## ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಧಾನಿ ನರೇಂದ್ರ ಮೋದಿ ಭಾಗಿ



## ಅಂತಾರಾಷ್ಟ್ರೀಯ ಸಹಕಾರ ದಿನ

ಧ್ಯೇಯ : ಸಹಕಾರ ವ್ಯವಸ್ಥೆಯಿಂದ ಉತ್ತಮ ಜಗತ್ತಿನ ನಿರ್ಮಾಣ

Theme: Cooperatives Build a Better World

100 ವರ್ಷಾಚರಣೆ



ಬಾಗಲಕೋಟೆ ಜಿಲ್ಲೆ ಸೂಳೆಬಾವಿ ಗಾಯತ್ರಿ ಪತ್ತಿನ ಸಹಕಾರ ಸಂಘದ ಬೆಳ್ಳಿ ಮಹೋತ್ಸವದ ಅಂಗವಾಗಿ ಬೆಂಗಳೂರಿನಲ್ಲಿ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಕೆ. ಲಲಿತ ಜಿ.ಟಿ. ದೇವೇಗೌಡ ಅವರನ್ನು ಗೌರವಿಸಲಾಯಿತು. ಮಹಾಮಂಡಳದ ಉಪಾಧ್ಯಕ್ಷರು, ನಿರ್ದೇಶಕರುಗಳು ಚಿತ್ರದಲ್ಲಿದ್ದಾರೆ.




ಗಾಯತ್ರಿ ಪತ್ತಿನ ಸಹಕಾರ ಸಂಘ ನಿ., ಸೂಳೆಬಾವಿ ಇದರ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ಮಹಾಮಂಡಳದ ನಿರ್ದೇಶಕರುಗಳಿಗೆ ಸನ್ಮಾನಿಸಿದ ಸಂದರ್ಭ.





**ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಉಪಸಮಿತಿಯ ಸದಸ್ಯರಿಂದ ಮಹಾಮಂಡಳದ ಕಟ್ಟಡ ನಿರ್ಮಾಣದ ಕಾಮಗಾರಿಯ ವೀಕ್ಷಣೆ**


## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988,

ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org

ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

## ಸಂಪಾದಕೀಯ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

1921ರಲ್ಲಿ ನಡೆದ ಐಸಿಎ ಸಂಸ್ಥೆಯ ಬಾಸ್ಲೆ ಕಾಂಗ್ರೆಸ್ ಸಹಕಾರ ಸಂಘಗಳು ಐಸಿಎ ಜೊತೆ ಸೇರಬೇಕಾದರೆ ರಾಕ್‌ಡೇಲ್ ತತ್ವಗಳಿಗೆ ಬದ್ಧವಾಗಿರಬೇಕು ಎಂಬ ಷರತ್ತನ್ನು ವಿಧಿಸಿತು. ಏಳು ಸಹಕಾರ ತತ್ವಗಳನ್ನು ಅಂಗೀಕರಿಸಿ ಎಲ್ಲಾ ರಾಷ್ಟ್ರಗಳು ಅಳವಡಿಸಿಕೊಳ್ಳಬೇಕೆಂದು ತಿಳಿಸಿತ್ತು. ಕಾಲಕಾಲಕ್ಕೆ ಸಹಕಾರ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗಳು ಉಂಟಾಗಿ ಸಹಕಾರ ಚಳುವಳಿ ಬೆಳೆಯುತ್ತಾ ಸಾಗಿದೆ. ವಿಶ್ವದ 770 ಕೋಟಿ ಜನಸಂಖ್ಯೆಯಲ್ಲಿ ಸಹಕಾರ ತತ್ವಗಳಲ್ಲಿ ನಂಬಿಕೆ ಉಳ್ಳವರು ಸದಸ್ಯತ್ವ ಪಡೆದಿದ್ದಾರೆ.

# ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆ 100 ವರ್ಷಗಳ ಸಾರ್ಥಕ ಸಂಭ್ರಮಾಚರಣೆಯಲ್ಲಿ

ವಿಶ್ವದ ಸಹಕಾರ ಆಂದೋಲನಕ್ಕೆ 150 ವರ್ಷಗಳ ಇತಿಹಾಸವಿದೆ. 18ನೇ ಶತಮಾನದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಆಧುನಿಕ ಆರ್ಥಿಕ ಪದ್ಧತಿ ಪ್ರಾರಂಭವಾಯಿತು. ಇದು ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿಗೆ ಕಾರಣವಾಯಿತು. ನಂತರ ನಡೆದಿದ್ದು ಇತಿಹಾಸದ ಪುಟಗಳಲ್ಲಿ ಸೇರಿದೆ. ಸಹಕಾರ ಚಳುವಳಿಯು ವಿಶ್ವವ್ಯಾಪಿಯಾಗಿ ಬೆಳೆಯತೊಡಗಿದಾಗ ಇದರ ಅಭಿವೃದ್ಧಿಗಾಗಿ ಮತ್ತು ಮಾರ್ಗದರ್ಶನ ನೀಡುವ ಉದ್ದೇಶದಿಂದ 1895ರಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ "ಅಂತಾರಾಷ್ಟ್ರೀಯ ಸಹಕಾರ ಮೈತ್ರಿ" ಸಂಸ್ಥೆಯನ್ನು ಲಂಡನ್‌ನಲ್ಲಿ ಸ್ಥಾಪಿಸಲಾಯಿತು.

1921ರಲ್ಲಿ ನಡೆದ ಐಸಿಎ ಸಂಸ್ಥೆಯ ಬಾಸ್ಲೆ ಕಾಂಗ್ರೆಸ್ ಸಹಕಾರ ಸಂಘಗಳು ಐಸಿಎ ಜೊತೆ ಸೇರಬೇಕಾದರೆ ರಾಕ್‌ಡೇಲ್ ತತ್ವಗಳಿಗೆ ಬದ್ಧವಾಗಿರಬೇಕು ಎಂಬ ಷರತ್ತನ್ನು ವಿಧಿಸಿತು. ಏಳು ಸಹಕಾರ ತತ್ವಗಳನ್ನು ಅಂಗೀಕರಿಸಿ ಎಲ್ಲಾ ರಾಷ್ಟ್ರಗಳು ಅಳವಡಿಸಿಕೊಳ್ಳಬೇಕೆಂದು ತಿಳಿಸಿತ್ತು.

ಕಾಲಕಾಲಕ್ಕೆ ಸಹಕಾರ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗಳು ಉಂಟಾಗಿ ಸಹಕಾರ ಚಳುವಳಿ ಬೆಳೆಯುತ್ತಾ ಸಾಗಿದೆ. ವಿಶ್ವದ 770 ಕೋಟಿ ಜನಸಂಖ್ಯೆಯಲ್ಲಿ ಸಹಕಾರ ತತ್ವಗಳಲ್ಲಿ ನಂಬಿಕೆ ಉಳ್ಳವರು ಸದಸ್ಯತ್ವ ಪಡೆದಿದ್ದಾರೆ. ಸಹಕಾರ ವಲಯದಲ್ಲಿ ಸಿಗುವ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.

ಭಾರತದಲ್ಲಿ ಸಹಕಾರ ಚಳವಳಿಗೆ 118 ವರ್ಷಗಳು. ಪ್ರಸ್ತುತ 8.5 ಲಕ್ಷ ವಿವಿಧ ರೀತಿಯ ಸಹಕಾರ ಸಂಘಗಳು 32 ಕೋಟಿಗೂ ಅಧಿಕ ಸದಸ್ಯ ಬಳಗವಿದ್ದು, ವಿಶ್ವದಲ್ಲಿಯೇ ಅತಿದೊಡ್ಡ ಸಹಕಾರ ಕ್ಷೇತ್ರವನ್ನು ಹೊಂದಿರುವ ದೇಶವೆಂಬ ಖ್ಯಾತಿ ಇದೆ.

ಸರ್ಕಾರಗಳ ಪ್ರೋತ್ಸಾಹ ಆರ್ಥಿಕ ನೆರವಿನಿಂದ ಸಹಕಾರ ಕ್ಷೇತ್ರ ಬೆಳೆಯುತ್ತಿದೆಯಾದರೂ ಸ್ವಾವಲಂಬನೆ, ಸ್ವಾಯತ್ತತೆಗಳಿಸಿಕೊಳ್ಳಬೇಕಾಗಿದೆ. ಇಫ್ಕೋ, ಕ್ರಿಭ್ಕೋ, ಅಮುಲ್‌ನಂತಹ ಹಲವಾರು ಸಂಸ್ಥೆಗಳು ವಿಶ್ವದ ಗಮನ ಸೆಳೆದಿವೆ.

ಕರ್ನಾಟಕದ ಕೃಷಿ ಪತ್ತು, ಕೃಷಿಯೇತರ ಪತ್ತು, ಬ್ಯಾಂಕಿಂಗ್, ಮಾರಾಟ, ಹೈನುಗಾರಿಕೆ, ಸಕ್ಕರೆ ಸೇರಿದಂತೆ ಹಲವು ವಲಯಗಳು ಉತ್ತಮ ಸೇವೆ ಸಲ್ಲಿಸಿ ಸಾಮಾಜಿಕ, ಆರ್ಥಿಕ, ಕ್ರಾಂತಿಗೆ ಕಾರಣವಾಗಿವೆ. ಹಾಗೆಯೇ, ಸಹಕಾರ ವಲಯದ ಮೂಲಕ ಸಾಧಿಸಬೇಕಾದುದು ಬಹಳಷ್ಟಿದೆ. ಇದಕ್ಕೆ ಸಹಕಾರಿ ನಾಯಕತ್ವ, ಬದ್ಧತೆಯ ಅವಶ್ಯಕತೆ ಇದೆ. ಕೋವಿಡ್ ಮಹಾಮಾರಿಯ ಸಂಕಷ್ಟಗಳ ನಡುವೆಯೂ ಸಹಕಾರ ಕ್ಷೇತ್ರ ಸದೃಢವಾಗಿದೆ ಎಂಬುದು ಗಮನಾರ್ಹವಾದುದು.

ಮುಂಬರುವ ದಿನಗಳಲ್ಲಿ ಬದ್ಧತೆ, ಪ್ರಾಮಾಣಿಕ ಸೇವೆಯಿಂದ ಚಳವಳಿಯನ್ನು ಬಲಪಡಿಸಬೇಕಾದ ಮತ್ತಷ್ಟು ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಯುವಜನರು ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು, ಉದ್ಯೋಗ ಸೃಷ್ಠಿ, ಆಡಳಿತಮಂಡಳಿಗಳಲ್ಲಿ ಮಾರ್ಗದರ್ಶನ ನೀಡಿ ಸಂಸ್ಥೆಗಳನ್ನು ಬಲಪಡಿಸುವುದು ಅಗತ್ಯವಾಗಿದೆ.

ಈ ವರ್ಷ ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆಯ ನೂರು ವರ್ಷಗಳ ಸಂಭ್ರಮಾಚರಣೆಯನ್ನು ಜುಲೈ-2, ಶನಿವಾರದಂದು ವಿಶ್ವದೆಲ್ಲೆಡೆಯಲ್ಲಿ ಆಚರಿಸಲಾಗುತ್ತಿದೆ. ವಿವಿಧ ವಿಷಯಗಳ ಬಗ್ಗೆ ಚಿಂತನ-ಮಂಥನ ನಡೆಯಲಿದೆ. ಈ ಸಂದರ್ಭದಲ್ಲಿ ಎಲ್ಲಾ ಸಹಕಾರಿ ಬಂಧುಗಳಿಗೆ ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆಯ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಯೋಗದಿಂದ ಜಗತ್ತನ್ನು ಒಗ್ಗೂಡಿಸಬಲ್ಲದು : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

**ಬೆಂಗಳೂರು :** ಯೋಗದಿಂದ ಜಗತ್ತನ್ನು ಒಂದು ಮಾಡಬಹುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಅವರು ಮೈಸೂರು ಅರಮನೆ ಮೈದಾನದಲ್ಲಿ ಆಯೋಜಿಸಿದ್ದ 8ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಪಾಲ್ಗೊಂಡು ಮಾತನಾಡಿದರು.

ಯೋಗ ಅಂತರರಾಷ್ಟ್ರೀಯ ದಿನಾಚರಣೆಯಾಗಲು ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಪಾತ್ರ ಬಹಳ ದೊಡ್ಡದಿದೆ. ಈ ಬಾರಿ ಮೈಸೂರಿಗೆ ಬಂದು ಅಂತರರಾಷ್ಟ್ರೀಯ ನಕ್ಷೆಯಲ್ಲಿ ಮೈಸೂರನ್ನು ತಂದಿರುವುದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುವುದಾಗಿ ತಿಳಿಸಿದರು. ಯೋಗ ಮನಸ್ಸು ಮತ್ತು ದೇಹವನ್ನು ಒಂದು ಮಾಡುವ ಸಾಧನ. ಯೋಗದಿಂದ ಆರೋಗ್ಯ ಮತ್ತು ಚರಿತ್ರೆ ಉಂಟಾಗುತ್ತದೆ. ಈ ದೇಶಕ್ಕೆ ದೊಡ್ಡ ಚರಿತ್ರೆ ಇದೆ. ಚಾರಿತ್ಯ ಅಗತ್ಯವಿದೆ. ಚಾರಿತ್ಯ




ನೀಡುವ ಕೆಲಸವನ್ನು ನರೇಂದ್ರ ಮೋದಿಯವರು ಮಾಡುತ್ತಿದ್ದಾರೆ. 'ಮಾನವೀಯತೆಗಾಗಿ ಯೋಗ' ಯಶಸ್ವಿಯಾಗಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

**ಸುಭಾಷಿತ :** ಅಡುಗೆ ಹಾಳಾದರೆ ಒಂದು ದಿನ ನಷ್ಟ, ಬೆಳೆ ಹಾಳಾದರೆ ಒಂದು ವರ್ಷವೇ ನಷ್ಟ;
ಆದರೆ, ವಿದ್ಯಾಭ್ಯಾಸ ಹಾಳಾದರೆ ಇಡೀ ಬದುಕೇ ನಷ್ಟ, ಜ್ಞಾನ ಹೆಚ್ಚಿಸಿಕೊಂಡರಷ್ಟೇ ನಮಗೆ ಬೆಲೆ – ಅಬ್ದುಲ್ ಕಲಾಂ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಮೈಸೂರಿನಲ್ಲಿ 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ
# 12000 ಉತ್ಸಾಹಿಗಳ ಯೋಗಾಭ್ಯಾಸ
# ಯೋಗ ಬದುಕಿನ ರಹದಾರಿ : ನರೇಂದ್ರ ಮೋದಿ





**ಮೈಸೂರು :** ಯೋಗ ಪರಂಪರೆಗೆ ರಾಜಾಶ್ರಯ ನೀಡಿ, ನೀರೆರೆದು ಪೋಷಿಸಿದ ಚರಿತ್ರೆ ಹೊಂದಿರುವ ವಿಶ್ವವಿಖ್ಯಾತ ಮೈಸೂರು ಅರಮನೆ, ಪ್ರಧಾನಿ ನರೇಂದ ಮೋದಿ ನೇತೃತ್ವದಲ್ಲಿ ಅದ್ದೂರಿಯಾಗಿ ಜರುಗಿದ ಸಾಮೂಹಿಕ ಯೋಗ ಪ್ರದರ್ಶನಕ್ಕೆ ಸಾಕ್ಷಿಯಾಯಿತು. ಕೇಂದ್ರ ಆಯುಷ್ ಮಂತ್ರಾಲಯ ಮತ್ತು ರಾಜ್ಯ ಸಕಾರದ ಸಹಯೋಗದಲ್ಲಿ "ಮಾನವೀಯತೆಗಾಗಿ ಯೋಗ" ಘೋಷವಾಕ್ಯದಡಿ ಆಯೋಜಿಸಿದ 8ನೇ ಅಂತಾರಾಷ್ಟೀಯ ಯೋಗ ದಿನಾಚರಣೆ ಭವ್ಯವಾಗಿ ನೆರವೇರಿತು. ಐತಿಹಾಸಿಕ ಯೋಗ ಉತ್ಸವದಿಂದ ಜಾಗತಿಕ ಭೂಪಟದಲ್ಲಿ 'ಅರಮನೆ ನಗರಿ' ಛಾಪು ಮೂಡಿಸಿತು. 12 ಎಕರೆ ವಿಸ್ತಾರದ ಅರಮನೆ ಅಂಗಳದಲ್ಲಿ 12 ಸಾವಿರ ಯೋಗಪಟುಗಳ ಸಾಮೂಹಿಕ ಯೋಗ ಪ್ರದರ್ಶನ ನೀಡಿದರು.

**ಯೋಗವೇ ಜೀವನ :** ಸಭಿಕರನ್ನುದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿ, ಯೋಗ ಸ್ವಾಸ್ಥ್ಯ, ಸಮತೋಲನ ಕಾಯ್ದುಕೊಳ್ಳುವ ಸಾಧನ. ಅದು ಜೀವನದ ಭಾಗವಲ್ಲ, ಅದುವೇ ಬದುಕಿನ ರಹದಾರಿ. ನಮ್ಮ ಹೃದಯದಿಂದ ಯೋಗ ಶುರುವಾದರೆ, ಅದಕ್ಕಿಂತ ಒಳ್ಳೆಯ ಆರಂಭ ಇನ್ನೊಂದು ಇರಲು ಸಾಧ್ಯವಿಲ್ಲ. ಇದನ್ನು ಕೆಲ ಗಂಟೆ, ದಿನಕ್ಕೆ ಸೀಮಿತಗೊಳಿಸಬಾರದು. ಯೋಗ ಸಾಧಕರು ಪ್ರಾಣಾಯಾಮವನ್ನು ಕಚೇರಿ, ಕರ್ತವ್ಯದ ನಡುವಿನ ಬಿಡುವಿನ ಸಂದರ್ಭದಲ್ಲೂ ಮಾಡುತ್ತಿದ್ದರು. ಅಂತೆಯೇ, ಅದೇ ಜೀವನವಾಗಬೇಕು. ಯೋಗವನ್ನು ಅರಿಯುವುದಷ್ಟೇ ಅಲ್ಲ, ಅದನ್ನು ಜೀವಿಸಬೇಕು. ಆತ್ಮೀಯವನ್ನಾಗಿಸಿಕೊಳ್ಳಬೇಕು. ಯೋಗದಿನ ಮಾತ್ರವಲ್ಲ, ಎಲ್ಲ ದಿನವೂ ಯೋಗದ ಮೂಲಕ ಸ್ವಾಸ್ಥ್ಯ, ಸುಖ ಮತ್ತು ಶಾಂತಿಯನ್ನು ಸಂಭ್ರಮಿಸಬೇಕು ಎಂದು ಕರೆಕೊಟ್ಟರು.

**ಮೈಸೂರು ಯೋಗದ ನೆಲೆಬೀಡು :** ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ದೇಶದ 75 ಐತಿಹಾಸಿಕ ಸ್ಥಳಗಳಲ್ಲಿ ಸಾಮೂಹಿಕ ಯೋಗಾಭ್ಯಾಸ ನಡೆದಿದೆ. ಇತಿಹಾಸದಲ್ಲಿ ವಿಶೇಷ ಸ್ಥಾನ ಹೊಂದಿರುವ ಮೈಸೂರು ಅರಮನೆ ಆವರಣದಲ್ಲಿ ನಡೆದಿರುವ ಯೋಗಾಭ್ಯಸ ದೇಶದ ವೈವಿಧ್ಯತೆಯನ್ನು ಯೋಗದ ಒಂದೇ ಸೂತ್ರದಲ್ಲಿ ಕೂಡಿಸುತ್ತದೆ. ಸಾಂಸ್ಕೃತಿಕವಾಗಿಯೂ ಕೊಂಡಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

**ಯೋಗದಲ್ಲಿ ನವೋದ್ಯಮ :** ಯೋಗ ಕ್ಷೇತ್ರವನ್ನು ಯುವಜನರು ಹೊಸ ಆಲೋಚನೆಯೊಂದಿಗೆ ಪ್ರವೇಶಿಸುತ್ತಿದ್ದಾರೆ. ಅವರಿಗೆ ಪ್ರೋತ್ಸಾಹಿಸಲು ಆಯಷ್ ಸಚಿವಾಲಯ ನವೋದ್ಯಮ ವೇದಿಕೆ ರೂಪಿಸಿಕೊಡುತ್ತಿದೆ. ಇದು ಯೋಗಯಾತ್ರೆಯಲ್ಲಿ ಯೋಗ ಸಂಪಾದನೆಗೂ ಅವಕಾಶ ಕಲ್ಪಿಸಿಕೊಡಲಿದೆ. ಅನಾದಿಕಾಲದ ಯೋಗಕ್ಕೆ ಅನಂತ ಭವಿಷ್ಯದ ದಾರಿಗಳಿವೆ. ಆ ಮಾರ್ಗದಲ್ಲಿ ಸ್ವಾಸ್ಥ್ಯ, ಶಾಂತಿಯನ್ನು ಪಡೆದುಕೊಳ್ಳಬೇಕಾಗಿದೆ ಎಂದು ನರೇಂದ್ರ ಮೋದಿ ತಿಳಿಸಿದರು.

71 ವರ್ಷದ ಮೋದಿ ಮಾಡಿದ ಪ್ರತಿ ಆಸನವೂ ಯುವ ಜನರನ್ನು ನಾಚಿಸುವಂತಿತ್ತು. ನಿಂತು, ಕುಳಿತು ಮತ್ತು ಮಲಗಿ ಮಾಡುವ ಹಲವು ಆಸನ ಹಾಗೂ ಪ್ರಾಣಾಯಾಮವನ್ನು ನಿರಾಯಾಸವಾಗಿ ನಿರ್ವಹಿಸುವ ಮೂಲಕ ಗಮನ ಸೆಳೆದರು. ಬೆಳಗ್ಗೆ 7 ಗಂಟೆಗೆ ಚಲನ ಕ್ರಿಯೆಯೊಂದಿಗೆ ಯೋಗ ಪ್ರದರ್ಶನಕ್ಕೆ ಚಾಲನೆ ದೊರೆಯಿತು. ಯೋಗ ಗುರುಗಳ ಸೂಚನೆಯಂತೆ ಸಮಸ್ಥಿತಿಯಿಂದ 4 ನಿಮಿಷ ಲಘು ವ್ಯಾಯಾಮ ಮಾಡಿ ತಯಾರಾದರು. ಬಳಿಕ ತಾಡಾಸನ, ವೃಕ್ಷಾಸನ, ಪಾದ ಹಸ್ತಾಸನ, ಅರ್ಧಚಕ್ರಾಸನ, ತ್ರಿಕೋನಾಸನ, ಅರ್ಧ ಉಷ್ಟ್ರಾಸನ, ಉಷ್ಟ್ರಾಸನ, ಶಶಂಕಾಸನ, ಉತ್ಥಾನ ಮಂಡೂಕಾಸನ, ವಕ್ರಾಸನ, ಮಕರಾಸನ... ಹೀಗೆ ನಾನಾ ಆಸನಗಳನ್ನು 25 ನಿಮಿಷಗಳ ಕಾಲ ಮಾಡಿದರು. ಕಪಾಲಭಾತಿ, ನಾಡಿಶೋಧ ಪ್ರಾಣಾಯಾಮ, ಶೀತಲಿ ಪ್ರಾಣಾಯಮ, ಭ್ರಾಮರಿ ಪ್ರಾಣಾಯಾಮದ ಬಳಿಕ ಧ್ಯಾನ ಮಾಡಿದರು.

## ಸಹಕಾರ ವಿಶ್ವವಿದ್ಯಾಲಯ ಕುರಿತು ರಾಷ್ಟ್ರೀಯ ಮಟ್ಟದ ವೆಬಿನಾರ್

# ಸಹಕಾರ ಡಿಪ್ಲೊಮಾ ಪದವಿಗಳಿಗೆ ಮಾನ್ಯತೆ ಅಗತ್ಯ : ಯಶವಂತ ಡೋಂಗ್ರೆ



**ನವದೆಹಲಿ:** ರಾಷ್ಟ್ರೀಯ ಸಹಕಾರಿ ಒಕ್ಕೂಟದಿಂದ ಜೂನ್ 3 ರಂದು ರಾಷ್ಟ್ರೀಯ ಮಟ್ಟದ ವೆಬಿನಾರ್ ಅನ್ನು ಆಯೋಜಿಸಲಾಗಿತ್ತು. ರಾಷ್ಟ್ರೀಯ ಸಹಕಾರಿ ಒಕ್ಕೂಟ ಹಾಗೂ ಇಫ್ಕೋ ಸಂಸ್ಥೆ ಅಧ್ಯಕ್ಷರಾದ ದಿಲೀಪ್ ಸಂಘಾನಿ ಅವರ ಅಧ್ಯಕ್ಷತೆಯಲ್ಲಿ ನಡೆದ ವೆಬ್‌ನಾರ್‌ನಲ್ಲಿ ದೇಶದ ಸಹಕಾರಿ ಕ್ಷೇತ್ರದ ಪ್ರಮುಖ ಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಂಶೋಧಕರು ಮತ್ತು ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ತಜ್ಞರು ಭಾಗವಹಿಸಿದ್ದರು.

ಈ ವೇಳೆ ಇಸ್ಲಾಮಿಯಾ ವಿಶ್ವವಿದ್ಯಾನಿಲಯದ ಉಪಕುಲಪತಿ ನಜ್ಮಾ ಅಖ್ತರ್ ಜಾಮಿಯಾ ಅವರು ಮಾತನಾಡಿ, ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಿಗಿಂತ ಸಹಕಾರಿ ವಿಶ್ವವಿದ್ಯಾಲಯಗಳು ಪರಿಣಾಮಕಾರಿಯಾಗಿರುತ್ತವೆ ಎಂದು ಹೇಳಿದರು.



ಸಹಕಾರಿ ಸಂಸ್ಥೆಗಳನ್ನು ನಿರ್ಲಕ್ಷಿಸುತ್ತಿರುವ ಸಂದರ್ಭದಲ್ಲಿ, ಸಹಕಾರಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದರಿಂದ ಸದಸ್ಯರಿಗೆ ಮತ್ತು ಸಹಕಾರಿ ಸಮುದಾಯಕ್ಕೆ ಅನುಕೂಲವಾಗುವಂತೆ ಸಹಕಾರ ಶಿಕ್ಷಣ ವ್ಯವಸ್ಥೆಯಲ್ಲಿ ಕಂಡುಬರುವ ದೊಡ್ಡ ಶೂನ್ಯವನ್ನು ತುಂಬುತ್ತದೆ. ಸಹಕಾರ ವಿಶ್ವವಿದ್ಯಾಲಯವು ಸಾಮಾಜಿಕ ನ್ಯಾಯ, ಸಹಕಾರ ತತ್ವಗಳು ಮತ್ತು ಮೌಲ್ಯಗಳಿಗೆ ದೊಡ್ಡ ಉತ್ತೇಜನವನ್ನು ನೀಡುತ್ತದೆ ಎಂದು ಅವರು ಹೇಳಿದರು.

ಬೆಂಗಳೂರಿನ ಚಾಣಕ್ಯ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಯಶವಂತ ಡೋಂಗ್ರೆ ಅವರು ಪ್ರಾಸ್ತಾವಿಕವಾಗಿ ಮಾತನಾಡಿ,ಸರ್ಕಾರ ಸಹಕಾರಿ ವಿಶ್ವವಿದ್ಯಾಲಯ ಸ್ಥಾಪಿಸಬೇಕು. ಸಹಕಾರಿ ಸಂಸ್ಥೆಗಳು ಅದರ ಫಲಾನುಭವಿಗಳು, ಸಾಲಗಾರರೂ ಆಗಬೇಕು. ಆದರೆ, ಬದಲಾಗುತ್ತಿರುವ ಸನ್ನಿವೇಶದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ರಚನೆಯಿಂದ ಸಹಕಾರಿ ವಿಶ್ವವಿದ್ಯಾಲಯ ಸ್ಥಾಪನೆಯಾಗಬಹುದು. ಸಹಕಾರಿ ಸಂಸ್ಥೆಗಳು ಪಾಲುದಾರರಾಗಬಹುದಾದ ಉತ್ಕೃಷ್ಟತೆಯ ಕೇಂದ್ರವಾಗಿ ಸರ್ಕಾರದಿಂದ ಸ್ಥಾಪಿತವಾದ ಸಹಕಾರ ವಿಶ್ವವಿದ್ಯಾನಿಲಯವು ಯುವಕರಿಗೆ ಉದ್ಯೋಗದ ಭರವಸೆ ನೀಡುವಂತಿರಬೇಕು ಎಂದರು.

ರಾಷ್ಟ್ರೀಯ ಸಹಕಾರಿ ಒಕ್ಕೂಟ ಹಾಗೂ ಇಫ್ಕೋ ಸಂಸ್ಥೆ ಅಧ್ಯಕ್ಷರಾದ ದಿಲೀಪ ಸಂಘಾನಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಹಕಾರಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು "ಸಹಕಾರದಿಂದ ಸಮೃದ್ಧಿ" ಎಂಬ ಸರ್ಕಾರದ ಬದ್ಧತೆಗೆ ಅನುಗುಣವಾಗಿದೆ ಎಂದು ಹೇಳಿದರು. ಸಹಕಾರಿ ತರಬೇತಿ ಸಂಸ್ಥೆಗಳು ನೀಡುವ ಡಿಪ್ಲೋಮಾಗಳಿಗೆ ಹೆಚ್ಚಿನ ಮೌಲ್ಯವಿಲ್ಲ ಮತ್ತು ಆದ್ದರಿಂದ ಸಹಕಾರ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಉಜ್ವಲಗೊಳಿಸುವಲ್ಲಿ ಯಶಸ್ಸು ಕಾಣುತ್ತದೆ ಎಂದು ಸೂಚಿಸಿದರು.

ರಾಷ್ಟ್ರೀಯ ಸಹಕಾರಿ ಒಕ್ಕೂಟದ ಮಾಜಿ ಅಧ್ಯಕ್ಷ ಮತ್ತು ಕೋಬಿ ಅಧ್ಯಕ್ಷ ಜಿ.ಎಚ್ ಅಮೀನ್ ಅವರು ಮಾತನಾಡಿ, ಸಹಕಾರಿ ಸಂಸ್ಥೆಗಳು ಮಾರುಕಟ್ಟೆ ಆರ್ಥಿಕತೆಯಲ್ಲಿ ಸ್ಪರ್ಧಿಸಬೇಕಾಗಿರುವುದರಿಂದ ಅವು ಬಲವಾದ ಮಾನವ ಸಂಪನ್ಮೂಲ ನೀತಿಯನ್ನು ಹೊಂದಬೇಕು, ಇದಕ್ಕಾಗಿ ಸಹಕಾರಿ ವಿಶ್ವವಿದ್ಯಾಲಯಗಳ ಸ್ಥಾಪನೆಯು ಮಹತ್ವದ್ದಾಗಿದೆ.

ಕೇಂದ್ರ ಸಹಕಾರ ಸಚಿವರ ವಿಶೇಷ ಅಧಿಕಾರಿಡಾ.ಕೆ.ಕೆ.ತ್ರಿಪಾಠಿ ಅವರು ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಗುಣಮಟ್ಟದ ಸಂಶೋಧನೆಯ

# ಸಹಕಾರದಿಂದ ಸಂತೃಪ್ತಿ ಸಾಧ್ಯವಿದೆ : ಅಮಿತ್ ಷಾ



**ಗುಜರಾತ್** : ಒಬ್ಬ ಅಬಲವರ್ಗದವರನ್ನು ಸ್ವಾವಲಂಬಿಯನ್ನಾಗಿ ಮಾಡಿದಾಗ ನಮ್ಮ ಜೀವನದಲ್ಲಿ ಬಹಳಷ್ಟು ತೃಪ್ತಿ ಸಿಗುತ್ತದೆ. ಹಾಗೆಯೇ ಸಹಕಾರ ಸಂಸ್ಥೆಗಳು ಇತರರ ಕಲ್ಯಾಣಕ್ಕಾಗಿ ಸದಾ ಕಾರ್ಯೋನ್ಮುಖವಾಗಿದ್ದಾಗ ಸಹಕಾರದಿಂದ ಸಂತೃಪ್ತಿ ಲಭ್ಯವಿದೆಯೆಂದು ಕೇಂದ್ರ ಸಹಕಾರ ಸಚಿವರಾದ ಅಮಿತ್ ಷಾ ತಿಳಿಸಿದರು.

ಅವರು ಇತ್ತೀಚೆಗೆ ಆನಂದ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್‌ಮೆಂಟ್ ಸಂಸ್ಥೆಯ 41ನೇ ಘಟಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಮುಂದುವರೆದು ಮಾತನಾಡುತ್ತಾ, ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು ಮುಂದೆ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಇದೇ ನೀವು ಈ IRMA ಸಂಸ್ಥೆಗೆ ನೀಡುವ ಗುರುದಕ್ಷಿಣೆಯಾಗುತ್ತದೆ ಎಂದು ಹಿತವಚನ ಹೇಳಿದರು.

ಆಧುನಿಕ ಕಾಲಮಾನದಲ್ಲಿ ಬದುಕುತ್ತಿರುವ ನಾವುಗಳು ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಇಂದಿನ ಕಾಲಮಾನಕ್ಕೆ ಅನುಗುಣವಾಗಿ ಗ್ರಾಮಗಳ ಅಭಿವೃದ್ಧಿಯಾಗಬೇಕು. ಗ್ರಾಮೀಣ ಜನರು ತಮ್ಮ ಸುಸ್ಥಿರವಾದ ಅಭಿವೃದ್ಧಿಯಲ್ಲಿ ವರ್ಗೀಸ್ ಕುರಿಯನ್‌ರವರನ್ನು ಸ್ಮರಿಸಿಕೊಳ್ಳಬೇಕು. ಮುಂದೆ ಭಾರತ ಸುಭಿಕ್ಷವಾಗಬೇಕಾದರೆ, ಗ್ರಾಮೀಣ ಸುಭಿಕ್ಷತೆಗೆ ಒತ್ತು ನೀಡಬೇಕೆಂದರು.

ಕೊರತೆಯಿರುವ ಸಮಯದಲ್ಲಿ ಸಹಕಾರಿ ವಿಶ್ವವಿದ್ಯಾಲಯವು ಈ ಕ್ಷೇತ್ರವನ್ನು ಬಲಪಡಿಸಲು ಸಶಕ್ತವಾಗುತ್ತದೆ ಎಂಬ ಅಂಶವನ್ನು ಆಳವಾಗಿ ವಿವರಿಸಿದರು. ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಮೊದಲು, ಸಹಕಾರಿ ಸಂಸ್ಥೆಗಳ ಶಿಕ್ಷಣ ಮತ್ತು ತರಬೇತಿ ಅಗತ್ಯಗಳ ಬಗ್ಗೆ ಸರಿಯಾದ ಮೌಲ್ಯಮಾಪನವನ್ನು ಮಾಡಬೇಕಾಗಿದೆ ಎಂದು ಅವರು ಹೇಳಿದರು.

ವೈಕುಂಠ ಮೆಹ್ತಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್‌ನ ನಿರ್ದೇಶಕಿ ಹೇಮಾ ಯಾದವ್ ಅವರು ಸಹಕಾರ ಶಿಕ್ಷಣದ ಸಾರ್ವತ್ರೀಕರಣದ ಅಗತ್ಯದ ಬಗ್ಗೆ ವಿವರಿಸಿ ಇದಕ್ಕಾಗಿ ಸಹಕಾರಿ ವಿಶ್ವವಿದ್ಯಾನಿಲಯಸ್ಥಾಪನೆ ಅತ್ಯಗತ್ಯ ಎಂದು ಪ್ರತಿಪಾದಿಸಿದರು.



ಡಾ.ಯಶವಂತ ಡೋಂಗ್ರೆ

ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್ಮೆಂಟ್‌ನ ಪ್ರೊ.ಶೈಲೇಂದ್ರ ಅವರು ಮಾತನಾಡಿ ವಿಶ್ವವಿದ್ಯಾನಿಲಯಗಳಲ್ಲಿ ಸಹಕಾರದ ಅಧ್ಯಯನವನ್ನು ನಿರ್ಲಕ್ಷಿಸಿರುವ ಸಮಯದಲ್ಲಿ ಸಹಕಾರಿ ಸಂಸ್ಥೆಯು ಸಹಕಾರಿ ತತ್ವಗಳು ಮತ್ತು ಮೌಲ್ಯಗಳಿಗೆ ಅನುಗುಣವಾಗಿ ಸಹಕಾರಿ ಸಂಸ್ಥೆಗಳ ಉದ್ದೇಶಕ್ಕಾಗಿ ಮೀಸಲಾದ ಸಹಕಾರಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಬಹಳ ಮುಖ್ಯ ಎಂದು ಹೇಳಿದರು.

ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್‌ನ ಸಹ ಪ್ರಾಧ್ಯಾಪಕಿ ಎಂಎಸ್ ಮಲ್ಲಿಕಾ ಕುಮಾರ್ ಅವರು ಸಹಕಾರ ವಿಶ್ವವಿದ್ಯಾಲಯಗಳು ಸಹಕಾರಿ ಕ್ಷೇತ್ರದಲ್ಲಿ ಜ್ಞಾನದ ಪ್ರಮಾಣವನ್ನುಹೆಚ್ಚು ಮಾಡುತ್ತದೆ ಎಂದು ಹೇಳಿದರು. ವಿಶ್ವವಿದ್ಯಾನಿಲಯವು ಸಹಕಾರಿ ಸಂಸ್ಥೆಗಳ ಅಗತ್ಯತೆಗಳಿಗೆ ಅನುಗುಣವಾಗಿ ನವೀನ ಕೋರ್ಸ್‌ಗಳನ್ನು ರೂಪಿಸಬೇಕು, ಯುವಜನರನ್ನು ಸಹಕಾರಿ ಕ್ಷೇತ್ರದತ್ತ ಆಕರ್ಷಿಸಲು ಪ್ರಾಯೋಗಿಕ ಕಲಿಕೆಯತ್ತ ಗಮನ ಹರಿಸಬೇಕು ಎಂದು ಅವರು ಹೇಳಿದರು.

ಸ್ವಯಂ ಉದ್ಯೋಗಿ ಮಹಿಳಾ ಸಂಸ್ಥೆಯ (SEWA) ಸಂಶೋಧನಾ ವ್ಯವಸ್ಥಾಪಕರಾದಪಾಲಕ್ ಅವರುಸ್ವಯಂ ಉದ್ಯೋಗಿ ಮಹಿಳಾ ಫೆಡರೇಶನ್ ಚಟುವಟಿಕೆಗಳ ಅವಲೋಕನವನ್ನು ನೀಡಿದರು ಮತ್ತು ಸಹಕಾರಿ ವಿಶ್ವವಿದ್ಯಾಲಯಗಳು ಅನೌಪಚಾರಿಕ ಮಹಿಳಾ ಕಾರ್ಮಿಕರಿಗೆ ವೇದಿಕೆಯನ್ನು ಒದಗಿಸುವ ಗುರಿಯನ್ನು ಹೊಂದಿರಬೇಕು ಎಂದು ಹೇಳಿದರು.

ರಾಷ್ಟ್ರೀಯ ಸಹಕಾರಿ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಸುಧೀರ್ ಮಹಾಜನ್ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿಓಅಗಿಖ ನ ಹೊಸ ಉಪಕ್ರಮಗಳಾದ NCUI Haat, Incubation Center, Entrepreneurship Development Cell, NIESBUD, ರೈನ್‌ಮ್ಯಾಟರ್ ಫೌಂಡೇಶನ್ ಆಫ್ ಇಂಡಿಯಾ, ನ್ಯಾಶನಲ್ ಅಸೋಸಿಯೇಶನ್ ಆಫ್ ಸ್ಟ್ರೀಟ್ ವೆಂಡರ್ಸ್‌ನೊಂದಿಗೆ ತಿಳುವಳಿಕಾ ಒಪ್ಪಂದಗಳಿಗೆ ಸಹಿ ಹಾಕಿರುವುದರ ಬಗ್ಗೆ ವಿಸ್ತಾರವಾಗಿ ವಿವರಿಸಿದರು. ಭಾರತ, ಕೂಪ್ ಕನೆಕ್ಟ್ ಕಾರ್ಯಕ್ರಮದಡಿಯಲ್ಲಿ 7000 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದರ ಬಗ್ಗೆ ವಿವರಿಸಿದರು.

# ಅಂತಾರಾಷ್ಟ್ರೀಯ ಸಹಕಾರ ದಿನ

ಧ್ಯೇಯ : ಸಹಕಾರ ವ್ಯವಸ್ಥೆಯಿಂದ ಉತ್ತಮ ಜಗತ್ತಿನ ನಿರ್ಮಾಣ

Theme: Cooperatives Build a Better World

1ca

100 ವರ್ಷಾಚರಣೆ

## ಅಂತಾರಾಷ್ಟ್ರೀಯ ಸಹಕಾರ ದಿನ, ಜುಲೈ 2, 2022, ಶನಿವಾರ

**ವಿಶ್ವದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಸಹಕಾರ ಸಂಸ್ಥೆಗಳು ನಿರ್ವಹಿಸುತ್ತಿರುವ ಪಾತ್ರವನ್ನು ಸ್ಮರಿಸುವ ಒಂದು ವೇದಿಕೆಯನ್ನಾಗಿ ನಾವು ಅಂತಾರಾಷ್ಟ್ರೀಯ ಸಹಕಾರ ದಿನವನ್ನು ಆಚರಿಸುತ್ತೇವೆ. ಅಂತಾರಾಷ್ಟ್ರೀಯ ಸಹಕಾರ ದಿನವನ್ನು 1923ರಲ್ಲಿ ಮೊದಲ ಬಾರಿಗೆ ಪ್ರತಿವರ್ಷ ಜುಲೈ ಮೊದಲ ಶನಿವಾರದಂದು "ಅಂತಾರಾಷ್ಟ್ರೀಯ ಸಹಕಾರ ದಿನ"ವೆಂದು ವಿಶ್ವಸಂಸ್ಥೆಯು ಘೋಷಣೆ ಮಾಡಿತು. ಇದರ ಉದ್ದೇಶ ಅಂದು ಸಹಕಾರಿಗಳು ಸಹಕಾರ ಚಳವಳಿಯ ಸಾಧನೆ ಹಾಗೂ ವೈಫಲ್ಯಗಳ ಕುರಿತು ಚರ್ಚಿಸಿ ಮುಂದಿನ ದಿನಗಳಲ್ಲಿ ಆಗಬೇಕಾದ ಕಾರ್ಯದ ಬಗ್ಗೆ ಗುರಿ ಹಾಕಿಕೊಳ್ಳುವುದಾಗಿದೆ. 2022ರ ವರ್ಷದಲ್ಲಿ 100ನೇ ವರ್ಷದ ಸಂಭ್ರಮದ ಜೊತೆಗೆ ಸಹಕಾರ ಸಂಸ್ಥೆಗಳನ್ನು ಹೆಚ್ಚು ಜಾಗೃತಗೊಳಿಸಿ ಸೇವಾ ಕ್ಷೇತ್ರದ ಜೊತೆಗೆ ಮಾನವ ಅಗತ್ಯಗಳ ಉತ್ಪಾದನಾ ವಲಯವಾಗಿ ಪೋಷಿಸಿ ಬೆಳೆಸುವುದರ ಜೊತೆಗೆ ಸಹಕಾರ ಸಂಸ್ಥೆಗಳ ಸದಸ್ಯರು, ಗ್ರಾಹಕರಿಗೆ ಗುಣಮಟ್ಟದ ಸೇವೆ ನೀಡುವುದು ಅಗತ್ಯವಾಗಿದ್ದು, ಜುಲೈ 2 ರಂದು ಈ ಕುರಿತು ಚಿಂತನ – ಮಂಥನ ನಡೆಯಲಿದೆ.**

ಈ ವರ್ಷ ಜುಲೈ 2 ರಂದು ಶನಿವಾರ ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಮುಂದಾಳತ್ವದಲ್ಲಿ 100ನೇ ಅಂತಾರಾಷ್ಟ್ರೀಯ ಸಹಕಾರ ದಿನವನ್ನು ವಿಶ್ವದೆಲ್ಲೆಡೆ ಆಚರಿಸಲಾಗುತ್ತಿದೆ. ಈ ವರ್ಷದ ಘೋಷಣೆ ಸಹಕಾರ ವ್ಯವಸ್ಥೆಯಿಂದ ಉತ್ತಮ ಜಗತ್ತಿನ ನಿರ್ಮಾಣ ಎಂಬುದಾಗಿದ್ದು, ಇದನ್ನು ನೂರಕ್ಕೆ ನೂರರಷ್ಟು ನಿಜವಾಗಿಸುವ ಜವಾಬ್ದಾರಿಯನ್ನು ಸಹಕಾರಿ ಸಂಘಗಳ ಸದಸ್ಯರು, ಸಿಬ್ಬಂದಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರ ಮೇಲಿದೆ.

ಸಹಕಾರ ತತ್ವ ಆಧಾರದ ಮೇಲೆ ಒಂದು ಸಮುದಾಯ, ಒಂದು ಸಮಾಜದ ಏಳಿಗೆಯನ್ನೇ ಗುರಿಯನ್ನಾಗಿಸಿಕೊಂಡು ಅದರ ಒಳಿತಿಗಾಗಿಯೇ ಕಾರ್ಯನಿರ್ವಹಿಸುವ ಸಹಕಾರ ವಲಯ ಇಂದು ವಿಶ್ವದಾದ್ಯಂತ ವ್ಯಾಪಕವಾಗಿ ಬೆಳವಣಿಗೆ ಹೊಂದುತ್ತಿದೆ. ಕೊರೋನಾದಂತಹ ಮಹಾಮಾರಿಯ ಸಂದರ್ಭದಲ್ಲಿ ದೇಶಗಳ ಆರ್ಥಿಕ ವ್ಯವಸ್ಥೆಗೆ ಬೆನ್ನೆಲುಬಾಗಿ, ಸಾಮಾಜಿಕ ಕಳಕಳಿಯನ್ನು ತೋರಿದ ಈ ಸಹಕಾರ ವಲಯ ನಿರ್ವಹಿಸಿದಂತಹ ಪಾತ್ರ ಅನನ್ಯವಾದುದಾಗಿದೆ.

ವಿಶ್ವದಲ್ಲಿ ಹಲವಾರು ದೇಶಗಳ ಸಹಕಾರಿ ಆಂದೋಲನವನ್ನು ಅವಲೋಕಿಸುತ್ತಾ ಸಾಗಿದಾಗ, ಸಹಕಾರ ಚಳವಳಿಯ ಮೂಲಕ ಇಂದು ಹಲವಾರು ಅಭಿವೃದ್ಧಿ ಕಾರ್ಯಗಳು ನೆರವೇರುತ್ತಿವೆ. ಸ್ವಸಹಾಯ ಹಾಗೂ ಸಹಕಾರಿ ಮೌಲ್ಯಗಳಿಂದ ಸಮಾಜದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ಸಾಧಿಸಲು ಸಾಧ್ಯವಿದೆ ಎಂಬುದನ್ನು ಈಗಾಗಲೇ ಸಹಕಾರ ಸಂಸ್ಥೆಗಳು ತೋರಿಸಿವೆ.

ಸಹಕಾರ ಸಂಸ್ಥೆಗಳು ಜಾಗತಿಕವಾಗಿ ಒಪ್ಪಿದ ಏಳು ತತ್ವಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುವುದರಿಂದ ನೈತಿಕ ಮೌಲ್ಯದ ಅಡಿಪಾಯದ ಮೇಲೆಯೇ ಬೆಳವಣಿಗೆ ಹೊಂದುತ್ತವೆ ಎಂದು ತಜ್ಞ ಬ್ರೂನೋ ರೋಲೆಂಟ್ ಎಂಬುವರು ಹೇಳುತ್ತಾರೆ. ಹಾಗಾಗಿ ಸಹಕಾರಿ



ಸಂಘಗಳು ಜಗತ್ತಿನಲ್ಲಿ ಉತ್ತಮ ಸಾಧನೆ ಮಾಡಲು ಪೂರಕವಾದ ವಾತಾವರಣ ನಿರ್ಮಾಣ ಮಾಡುತ್ತವೆ ಎಂದು ಆಶಿಸಬಹುದಾಗಿದೆ. ಆದ್ದರಿಂದಾಗಿ ನಾವು ಇಂದು ಉತ್ತಮ ಸಮಾಜ ನಿರ್ಮಾಣದಲ್ಲಿ ಸಹಕಾರ ವಲಯದ ಆಯ್ಕೆಗೆ ಹೆಚ್ಚು ಪ್ರಾಧಾನ್ಯತೆ ನೀಡಬೇಕಾಗುತ್ತದೆ. ಹೊಸ ವಲಯಗಳತ್ತ ಹೆಜ್ಜೆ ಹಾಕಬೇಕಾಗುತ್ತದೆ.

ಭಾರತ ದೇಶ ಸಹಕಾರಿ ಆಂದೋಲನದಲ್ಲಿ ಬೃಹದಾಕಾರವಾಗಿ ಬೆಳೆದು ಮುಂಚೂಣಿಯಲ್ಲಿ ಸಾಗುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ವಿವಿಧ ರೀತಿಯ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುವ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿವೆ. ಕೃಷಿ, ಹೈನೋದ್ಯಮ, ರಸಗೊಬ್ಬರ, ಸಕ್ಕರೆ, ಆಹಾರ ಸಂಸ್ಕರಣೆ, ಗ್ರಾಹಕ ವಲಯ, ಪತ್ತಿನ ವಲಯಗಳು ಸಹಕಾರಿ ವ್ಯವಸ್ಥೆಯಡಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ನಮ್ಮ ದೇಶದಲ್ಲಿ ಹೈನೋದ್ಯಮದಲ್ಲಿ ಖ್ಯಾತಿ ಗಳಿಸಿರುವ ಸಂಸ್ಥೆಗಳಾದಂತಹ ಅಮುಲ್ ಹಾಗೂ ಕೆ.ಎಂ.ಎಫ್., ಕೃಷಿ ಚಟುವಟಿಕೆಗಳಿಗೆ ಪೂರಕವಾಗಿರುವ ನ್ಯಾಫೆಡ್, ಕ್ರಿಬ್ಕೋ, ಇಫ್ಕೋ



ಹಾಗೂ ಗೃಹ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುತ್ತಿರುವ ಸಂಸ್ಥೆಗಳು, ಪಟ್ಟಣ ಸಹಕಾರ ಬ್ಯಾಂಕಿಂಗ್ ವಲಯ ಸೇರಿದಂತೆ ಸಹಕಾರಿ ಆಸ್ಪತ್ರೆಗಳು ಸಹ ಕೊರೋನಾ ಮಹಾಮಾರಿಯ ಸಂದರ್ಭದಲ್ಲಿ ನಿರ್ವಹಿಸಿದ ಕಾರ್ಯನಿರ್ವಹಣೆ ಪ್ರಶಂಸನೀಯವಾದುದಾಗಿದೆ.

ಗ್ರಾಮೀಣ ಮಟ್ಟದಿಂದ ರಾಷ್ಟ್ರಮಟ್ಟದವರೆಗೂ ಲಕ್ಷಾಂತರ ಸಹಕಾರಿ ಸಂಸ್ಥೆಗಳು ತಮ್ಮದೇ ಆದ ಸಾಮಾಜಿಕ ಹಾಗೂ ಆರ್ಥಿಕ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಯಶಸ್ಸನ್ನು ಗಳಿಸಿ ಕೋಟ್ಯಂತರ ಜನರು ನೆಮ್ಮದಿಯ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಉತ್ತೇಜನ–ಪ್ರೋತ್ಸಾಹ ನೀಡುತ್ತಿವೆ. ಈ ಎಲ್ಲಾ ಅಂಶಗಳನ್ನು ನಾವು ಅವಲೋಕನ ಮಾಡಿದಾಗ ಪ್ರಸ್ತುತ ನಾವು ಆಚರಿಸುತ್ತಿರುವ "ಅಂತಾರಾಷ್ಟ್ರೀಯ ಸಹಕಾರ ದಿನ"ದ ಘೋಷ ವಾಕ್ಯವಾದ "ಸಹಕಾರ ಸಂಸ್ಥೆಗಳು ಉತ್ತಮ ಜಗತ್ತನ್ನು ನಿರ್ಮಾಣ ಮಾಡಬಲ್ಲವು" ಎಂಬುದು ಸಮಂಜಸವಾಗಿದ್ದು, ಮುಂದಿನ ದಿನಗಳಲ್ಲಿ ಜನಸಾಮಾನ್ಯರಿಗೆ ಅಗತ್ಯವಿರುವ ಪ್ರತಿಯೊಂದನ್ನು ಸಹಕಾರಿ ವ್ಯವಸ್ಥೆಯೊಂದೇ ಅಚ್ಚುಕಟ್ಟಾಗಿ ಪೂರೈಕೆ ಮಾಡುವ ಮೂಲಕ ಸುಸ್ಥಿರವಾಗಿ ಸಹಕಾರ ಚಳವಳಿ ಬೆಳವಣಿಗೆ ಹೊಂದುವ ಅಗತ್ಯವಿದೆ.

ಸಹಕಾರ ವ್ಯವಸ್ಥೆ ಇಂದು ಕೇವಲ ಸೇವೆಯ ಜೊತೆಗೆ ಉತ್ಪಾದನಾ ವಲಯವಾಗಿ ಮಾತ್ರ ಉಳಿದಿಲ್ಲ. ಅದೊಂದು ಜೀವನದ ಅತ್ಯಾವಶ್ಯಕ ವಾಹಕವಾಗಿ ಹೊರಹೊಮ್ಮುತ್ತಿದೆ. ನಾಯಕರನ್ನು ಸೃಷ್ಠಿ ಮಾಡುವ ಶಕ್ತಿಯನ್ನೊಂದಿದೆ. ಸಾಮಾಜಿಕ ಹಾಗೂ ಆರ್ಥಿಕ ನ್ಯಾಯ ಒದಗಿಸುವಲ್ಲಿ ಯಶಸ್ಸು ಗಳಿಸಿದೆ. ಸಾಮಾಜಿಕವಾಗಿ ಅಬಲರಿಗೆ ಆಶ್ರಯತಾಣವಾಗಿದೆ. ಉದ್ಯೋಗವಕಾಶಗಳ ಸೃಷ್ಠಿಗೆ ಪೂರಕವಾದ ವಾತಾವರಣ ನಿರ್ಮಾಣ ಮಾಡುವಲ್ಲಿ ಮೇಲುಗೈ ಸಾಧಿಸಿದೆ. ದೇಶದ ಬೆಳವಣಿಗೆಗೆ ಬೆನ್ನಲುಬಾಗಿ ನಿಂತಿದೆ. ಹೀಗೆ ನಾನಾ ರೂಪಗಳಲ್ಲಿ ಈ ವಲಯ ತನ್ನದೇಯಾದ ಪಾತ್ರಗಳನ್ನು ಅತ್ಯಂತ ಸುಗಮವಾಗಿ, ತ್ವರಿತವಾಗಿ ಸಾಕಾರಗೊಳಿಸುತ್ತಿದೆ.

ಕೆಲವೊಂದು ಸಣ್ಣ ಪುಟ್ಟ ಲೋಪಗಳು ಈ ವಲಯದಲ್ಲಿ ಕಂಡುಬಂದರೂ ಅದೊಂದು ಸಾಂದರ್ಭಿಕ ಅವಘಡವಾಗಿದ್ದು, ತ್ವರಿತವಾಗಿ ಪರಿಹಾರವಾಗುತ್ತಿವೆ. ಆದ್ದರಿಂದ ಉತ್ತಮ ಜಗತ್ತಿನ ನಿರ್ಮಾಣದಲ್ಲಿ ಸಹಕಾರಿ ವಲಯ ಹಾಗೂ ಸಹಕಾರಿ ಆಂದೋಲನದ ಪಾತ್ರ ಅಪಾರವಾದುದಾಗಿದೆ. ಆದ್ದರಿಂದ ಜುಲೈ ಮೊದಲ ಶನಿವಾರದಂದು ಆಚರಿಸಲಾಗುವ ಅಂತಾರಾಷ್ಟ್ರೀಯ ಸಹಕಾರ ದಿನ "ಮುಂದಿನ ದಿನಗಳಲ್ಲಿ ಈ ವಲಯದ ಮೂಲಕ ಮತ್ತಷ್ಟು ಪರಿಣಾಮಕಾರಿ ಚಟುವಟಿಕೆಗಳು ನಡೆಯಲು ಚರ್ಚಿಸುವ ಉತ್ತಮ ವೇದಿಕೆಯಾಗಲಿ.

**– ದೀಪಾ ಜಗದೀಶ್ (ಕೃಪೆ : ಸಹಕಾರ)**



## 100ನೇ ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆ

# ತಂತ್ರಜ್ಞಾನ ಬಳಕೆಯಿಂದ ಸಹಕಾರ ವ್ಯವಸ್ಥೆಯನ್ನು ಬಲಪಡಿಸಲಾಗುವುದು ಸಚಿವ ಎಸ್.ಟಿ. ಸೋಮಶೇಖರ್



**ಬೆಂಗಳೂರು** : ದೇಶಾದ್ಯಂತ ಸಹಕಾರ ಚಳವಳಿ ಪ್ರತಿ ಹಳ್ಳಿಗೂ ತಲುಪಿದ್ದು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಆರ್ಥಿಕ ನೆರವಿನಿಂದ ತಂತ್ರಜ್ಞಾನ ಬಳಸಿ, ಸಹಕಾರ ವ್ಯವಸ್ಥೆಯನ್ನು ಬಲಪಡಿಸಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ನಗರದಲ್ಲಿ ಏರ್ಪಡಿಸಿದ್ದ 100ನೇ ಅಂತಾರಾಷ್ಟ್ರೀಯ ಸಹಕಾರ ದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಸಹಕಾರ ವ್ಯವಸ್ಥೆಯನ್ನು ಬಲಪಡಿಸಲು ಕೇಂದ್ರ ಸರ್ಕಾರ ಪ್ರತ್ಯೇಕ ಸಹಕಾರ ಸಚಿವಾಲಯ ರಚನೆ ಮಾಡಿ ಹೆಚ್ಚಿನ ಆದ್ಯತೆ ನೀಡುತ್ತಿದೆ. ಇದರಿಂದ ಸಹಕಾರ ವ್ಯವಸ್ಥೆ ಮತ್ತಷ್ಟು ಬಲಗೊಳ್ಳಲು ಸಾಧ್ಯವಾಗಲಿದೆ ಎಂದರು.

ಸಹಕಾರ ಕ್ಷೇತ್ರ ಮುನ್ನಡೆಯಲು ಉತ್ತಮ ನಾಯಕತ್ವ, ಸಹಕಾರಿಗಳಲ್ಲಿ ಬದ್ಧತೆ, ಸಿಬ್ಬಂದಿಗಳಲ್ಲಿ ವೃತ್ತಿಪರತೆ ಅಗತ್ಯ. ಈ ನಿಟ್ಟಿನಲ್ಲಿ ಸಹಕಾರ ಮಹಾಮಂಡಳವು ನಡೆಸುತ್ತಿರುವ ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಮತ್ತಷ್ಟು ಪರಿಣಾಮಕಾರಿಗೊಳಿಸುವ ಉದ್ದೇಶ ಹಾಗೂ ಸಹಕಾರಿ ವ್ಯವಸ್ಥೆಯಲ್ಲಿ ಉದ್ಯೋಗವಕಾಶಗಳನ್ನು ಕಲ್ಪಿಸಲು ಸಹಕಾರ ತರಬೇತಿಯನ್ನು ಕಡ್ಡಾಯಗೊಳಿಸಲಾಗುವುದು. ಈ ಬಗ್ಗೆ ಮುಂದಿನ ಅಧಿವೇಶನದಲ್ಲಿ ಕಾನೂನು ತಿದ್ದುಪಡಿ ತರಲು ಚಿಂತಿಸಲಾಗಿದೆ ಎಂದರು.



ಗ್ರಾಮೀಣ ಮತ್ತು ನಗರ ಸಹಕಾರಿಗಳಿಗೆ ಆರೋಗ್ಯ ರಕ್ಷಣೆಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಅಕ್ಟೋಬರ್ 2 ರಂದು ಮರುಜಾರಿಗೊಳಿಸಲಾಗುವುದು ಎಂದ ಅವರು ನಂದಿನಿ ಕ್ಷೀರ ಸಮೃದ್ಧಿ ಬ್ಯಾಂಕ್ ಸ್ಥಾಪನೆ ಕುರಿತಂತೆ ಕೇಂದ್ರ ಹಣಕಾಸು ಸಚಿವರಿಗೆ ಪತ್ರ ಬರೆಯಲಾಗಿದೆ ಎಂದರು. ಕಾರ್ಯಕ್ರಮದ ಆರಂಭದಲ್ಲಿ ಸಚಿವರು ರೇಸ್‌ಕೋರ್ಸ್ ರಸ್ತೆಯ ಸಹಕಾರ ಮಹಾಮಂಡಳದ ಆವರಣದಲ್ಲಿ ಸಹಕಾರ ಧ್ವಜಾರೋಹಣ ನೆರವೇರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕರು ಹಾಗೂ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಅವರು ಮಾತನಾಡಿ, ಸಹಕಾರ ಮಹಾಮಂಡಳದ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮಹಾಮಂಡಳ ಮತ್ತು ಜಿಲ್ಲಾ ಸಹಕಾರ ಯೂನಿಯನ್‌ಗಳು ಸಹಕಾರ ಕ್ಷೇತ್ರದ ಸಮಗ್ರ ಮಾಹಿತಿಗಳನ್ನು ಸಂಗ್ರಹಿಸಿ, ಮಾಹಿತಿ ಕೇಂದ್ರವನ್ನಾಗಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಸಹಕಾರ ಕ್ಷೇತ್ರದ ಸೌಲಭ್ಯಗಳು ಹೆಚ್ಚಿನ ಜನರಿಗೆ ತಲುಪಬೇಕಾಗಿರುವುದರಿಂದ ಸಹಕಾರಿ ಕಕ್ಷೆಗೆ ಹೆಚ್ಚಿನ ಜನರನ್ನು ಆಕರ್ಷಿಸಬೇಕಾಗಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ವೇದಿಕೆಯ ಮೇಲೆ ಸಹಕಾರ ಸಂಘಗಳ ನಿಬಂಧಕರಾದ ಡಾ. ಎಂ.ವಿ. ವೆಂಕಟೇಶ್, ಮೈಸೂರು ವಿವಿ ಪ್ರಾಧ್ಯಾಪಕರಾದ ಯಶವಂತ ಡೋಂಗ್ರೆ, ಮಹಾಮಂಡಳದ ನಿರ್ದೇಶಕರುಗಳಾದ ಶಕುಂತಲಾ ಬೆಲ್ದಾಳೆ, ಬಿ.ಸಿ. ಲೋಕಪ್ಪಗೌಡ, ಬಾಪೂಗೌಡ ಪಾಟೀಲ್, ಆರ್. ರಾಮರೆಡ್ಡಿ, ಬಿ.ಡಿ. ಭೂಕಾಂತ್, ಈರಣ್ಣ ಪಟ್ಟಣಶೆಟ್ಟಿ, ಜೆ.ಎಂ. ಶಿವಪ್ರಸಾದ್, ವ್ಯವಸ್ಥಾಪಕ ನಿರ್ದೇಶಕರಾದ ಎಸ್. ಅರಳಿ ಸೂರ್ಯಕಾಂತ್, ಕಾರ್ಯದರ್ಶಿ ಲಕ್ಷ್ಮೀಪತಯ್ಯ ಅವರುಗಳು ಉಪಸ್ಥಿತರಿದ್ದರು.

ಜುಲೈ ಮೊದಲ ಶನಿವಾರ (2-7-2022)

## ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆ

ಧ್ಯೇಯ : ಸಹಕಾರ ವ್ಯವಸ್ಥೆಯಿಂದ ಉತ್ತಮ ಜಗತ್ತನ್ನು ನಿರ್ಮಾಣ ಮಾಡಲು ಸಾಧ್ಯ

# ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಅಧ್ಯಕ್ಷರಾಗಿ ಏರಿಯಲ್ ಗೋರ್ಕೋ ಪುನರಾಯ್ಕೆ



ಸ್ಪೇನ್‌ನ ಸೆವಿಲ್ಲೆಯಲ್ಲಿರುವ ಐಸಿಎ ಜನರಲ್ ಅಸೆಂಬ್ಲಿಯಲ್ಲಿ 2022ರ ಜೂನ್ 20 ರಂದು ನಡೆದ ಚುನಾವಣೆಯಲ್ಲಿ ಅರ್ಜೆಂಟೀನಾದ ಏರಿಯಲ್ ಗೋರ್ಕೋ ಅವರು ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ (ಐಸಿಎ) ಅಧ್ಯಕ್ಷರಾಗಿ ಮರು ಆಯ್ಕೆಯಾಗಿದ್ದಾರೆ.

ಹದಿನೈದು ಜನರ ಆಡಳಿತ ಮಂಡಳಿ ನಿರ್ದೇಶಕರುಗಳು ಆಯ್ಕೆಯಾಗಿದ್ದು, ಭಾರತದ ಪ್ರತಿನಿಧಿಯಾಗಿ ಆದಿತ್ಯ ಯಾದವ್ ಅವರು ಆಯ್ಕೆಯಾಗಿರುವುದು ವಿಶೇಷವಾಗಿದೆ. ಏತನ್ಮಧ್ಯೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬಳಕೆದಾರರು ಸಾಮಾಜಿಕ ಮಾಧ್ಯಮಗಳ ಮೂಲಕ ಅವರನ್ನು ಅಭಿನಂದಿಸುವಲ್ಲಿ ನಿರತರಾಗಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಏರಿಯಲ್ ಗೋರ್ಕೋ ಅವರು "2017 ರಿಂದ ನಾನು ICAಯ ಅಧ್ಯಕ್ಷನಾಗಿದ್ದು ಈ ಒಂದು ಮಹಾನ್ ಸಂಸ್ಥೆಯಲ್ಲಿ ಸದಸ್ಯರೊಂದಿಗೆ ಕೆಲಸ ಮಾಡಲು ನಾನು ಅದೃಷ್ಟಶಾಲಿಯಾಗಿದ್ದೇನೆ. ಜಾಗತಿಕ ಸಹಕಾರ ಆಂದೋಲನಕ್ಕೆ ನಿಮ್ಮ ಕೊಡುಗೆಗಾಗಿ ನಾನು ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಲು ಬಯಸುತ್ತೇನೆ ಎಂದರು.

# ಕಣಗಿನಹಾಳ : ಮಹಾಮಂಡಳದ ನಿರ್ದೇಶಕರ ಭೇಟಿ



**ಕಣಗಿನಹಾಳ:** ರಾಷ್ಟ್ರದ ಪ್ರಪ್ರಥಮ ಕೃಷಿ ಪತ್ತಿನ ಸಹಕಾರ ಸಂಘ, ಕಣಗಿನಹಾಳ ಇಲ್ಲಿಗೆ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ನಿರ್ದೇಶಕರಾದ ಡಾ. ಬಿ.ಡಿ. ಭೂಕಾಂತ್ ಅವರು ಭೇಟಿ ನೀಡಿದ್ದರು. ನಂತರ ಸಹಕಾರ ಪಿತಾಮಹಾ ಶಿದ್ದನಗೌಡ ಸಂಣರಾಮನಗೌಡ ಪಾಟೀಲರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಮಿಸಿದರು.

# ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಪಡುಬಿದ್ರಿ ಶಾಖೆ ಉದ್ಘಾಟನಾ ಸಮಾರಂಭ ಜಿಲ್ಲೆಯ ಪ್ರಗತಿಗೆ ಸಹಕಾರ ರಂಗದ ಕೊಡುಗೆ ಅಪಾರ



**ಪಡುಬಿದ್ರಿ:** ಬ್ಯಾಂಕಿಂಗ್, ಆರೋಗ್ಯ, ಶಿಕ್ಷಣ ಮತ್ತು ಸಹಕಾರಿ ಕ್ಷೇತ್ರದಲ್ಲಿ ಅವಿಭಜಿತ ದ.ಕ ಜಿಲ್ಲೆಯ ಕೊಡುಗೆ ಅಪಾರವಾದುದು. ಅದೇ ರೀತಿ ಜಿಲ್ಲೆ ಸಮಗ್ರ ಅಭಿವೃದ್ಧಿಯಾಗಲು ಸಹಕಾರಿ ರಂಗವೇ ಕಾರಣ ಎಂದು ಕಾಪು ಶಾಸಕ ಲಾಲಾಜಿ ಆರ್. ಮೆಂಡನ್ ಹೇಳಿದರು.

ಪಡುಬಿದ್ರಿ ಮುಖ್ಯ ರಸ್ತೆಯ ಧನ್ವಂತರಿ ಕೃಪಾ ಅಂಚನ್ ಸಂಕೀರ್ಣದಲ್ಲಿ ಆರಂಭಗೊಂಡ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ 23ನೇ ಪಡುಬಿದ್ರಿ ಶಾಖೆಯನ್ನು ಉದ್ಘಾಟಿಸಿ ಮಾತನಾಡಿದರು.

ಮಾಜಿ ಸಚಿವ ವಿನಯಕುಮಾರ್ ಸೊರಕೆ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ, ಅತೀ ಕಡಿಮೆ ಅವಧಿಯಲ್ಲಿ 23 ಶಾಖೆಗಳನ್ನು ಹೊಂದುವ ಮೂಲಕ ಬಲಿಷ್ಠಗೊಂಡ ಸಂಸ್ಥೆಯು ಅತೀ ಶೀಘ್ರವಾಗಿ 100 ಶಾಖೆಗಳನ್ನು ಹೊಂದುವಂತಾಗಲಿ ಎಂದರು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ , ದಶಮಾನೋತ್ಸವ ಸಂಭ್ರಮದಲ್ಲಿರುವ ಆತ್ಮಶಕ್ತಿ ಸಂಘವು ಅತೀ ಶೀಘ್ರದಲ್ಲಿ ಸಂಘದ 24ನೇ ಶಾಖೆ ಗಂಜಿಮಠದಲ್ಲಿ ಮತ್ತು 25ನೇ ಶಾಖೆ ಕಾಪುವಿನಲ್ಲಿ ಆರಂಭಿಸಲಿದೆ ಎಂದರು.

ಪಡುಬಿದ್ರಿ ಸಹಕಾರಿ ವ್ಯವಸಾಯಿಕ ಸಂಘದ ಅಧ್ಯಕ್ಷ ವೈ.ಸುಧೀರ್ ಕುಮಾರ್ ಸಂಘದ ಭದ್ರತಾ ಕೋಶ ಉದ್ಘಾಟಿಸಿದರು. ಪಡುಬಿದ್ರಿ ಗ್ರಾ.ಪಂ. ಅಧ್ಯಕ್ಷ ರವಿ ಶೆಟ್ಟಿ ಗಣಕೀಕೃತ ಬ್ಯಾಂಕಿಂಗ್ ಸೇವೆಗೆ ಚಾಲನೆ ನೀಡಿದರು. ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷ ಉದಯ ಅಮೀನ್ ಮಟ್ಟು ಮೈಕ್ರೋ ಸಾಲ ಯೋಜನೆಗೆ ಚಾಲನೆ ನೀಡಿದರು. ಪಡುಬಿದ್ರಿ ರೋಟರಿ ಅಧ್ಯಕ್ಷ ಮಹಮ್ಮದ್ ನಿಯಾಝ್ ಇ–ಮುದ್ರಾಂಕ ಸೇವೆಗೆ ಚಾಲನೆ ನೀಡಿದರು. ಪಡುಬಿದ್ರಿ ತರಂಗಿಣಿ ಮಿತ್ರ ಮಂಡಳಿ ಅಧ್ಯಕ್ಷ ರಮಾಕಾಂತ ರಾವ್ ಉಳಿತಾಯ ಯೋಜನೆಗೆ ಚಾಲನೆ ನೀಡಿದರು. ಹೆಜಮಾಡಿ ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರಾಣೇಶ್ ಹೆಜ್ಮಾಡಿ ನಿರಖು ಠೇವಣಿ ಯೋಜನೆಗೆ ಚಾಲನೆ ನೀಡಿದರು. ಪಡುಬಿದ್ರಿ ಅಂಚನ್ ಅಯುರ್ವೇದಿಕ್ ಇಂಡಸ್ಟ್ರೀಸ್ ಮಾಲೀಕರಾದ ಡಾ. ಎನ್. ಟಿ. ಅಂಚನ್ ವಿಶೇಷ ಚಿನ್ನಾಭರಣ ಸಾಲ ಯೋಜನೆಗೆ ಚಾಲನೆ ನೀಡಿದರು.

ಪಲಿಮಾರು ಗ್ರಾ.ಪಂ. ಪೂರ್ವಾಧ್ಯಕ್ಷ ಜಿತೇಂದ್ರ ಫುರ್ಟಾಡೋ ರವರು ಆವರ್ತನ ಖಾತೆಗೆ ಚಾಲನೆ ನೀಡಿದರು. ಆತ್ಮಶಕ್ತಿ ಸಂಘದ ಉಪಾಧ್ಯಕ್ಷ ನೇಮಿರಾಜ್ ಪಿ., ನಿರ್ದೇಶಕರಾದ ಜಿ. ಪರಮೇಶ್ವರ ಪೂಜಾರಿ, ಆನಂದ ಎಸ್. ಕೊಂಡಾಣ, ಸೀತಾರಾಮ ಎನ್, ರಮಾನಾಥ ಸನಿಲ್, ಚಂದ್ರಹಾಸ್ ಮರೋಳಿ, ದಿವಾಕರ ಬಿ. ಪಿ., ಗೋಪಾಲ ಎಮ್., ಚಂದ್ರಾವತಿ, ಉಮಾವತಿ ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷರಾದ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಸ್ವಾಗತಿಸಿದರು. ಸಂಘದ ಸಿಬ್ಬಂದಿ ನಿತಿನ್ ಕಾರ್ಯಕ್ರಮ ನಿರೂಪಿಸಿದರು. ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ಸೌಮ್ಯ ವಿಜಯ್ ವಂದಿಸಿದರು.

# ಮೂರು ದಶಕಗಳ ಸಾರ್ಥಕ ಸೇವೆಯಲ್ಲಿ
# ದಿ ಕರಾವಳಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ರೂ. 5.87 ಕೋಟಿ ಲಾಭ.






ಎ.ಎಸ್. ವೆಂಕಟೇಶ್
ಅಧ್ಯಕ್ಷರು



ರಮೇಶ್ ಮೆಂಡನ್ ಟಿ.
ಉಪಾಧ್ಯಕ್ಷರು

ಮಂಗಳೂರಿನಲ್ಲಿ 1992ರಲ್ಲಿ ಸ್ಥಾಪನೆಯಾದ ದಿ ಕರಾವಳಿ ಕ್ರೆಡಿಟ್ ಕೋಪರೇಟಿವ್ ಸೊಸೈಟಿ ಸದಸ್ಯರ ಸೇವೆಯಲ್ಲಿ ಯಶಸ್ವಿ 30 ವರ್ಷಗಳನ್ನು ಪೂರೈಸಿದೆ.

ಸಂಘದ ಕಾರ್ಯವ್ಯಾಪ್ತಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯನ್ನು ಒಳಗೊಂಡಿದ್ದು ಒಟ್ಟು 14 ಶಾಖೆಗಳನ್ನು ಹೊಂದಿದ್ದು ಹಾಗೂ ಸಂಘವು ಅತ್ತಾವರದಲ್ಲಿರುವ ಪ್ರಧಾನ ಕಛೇರಿ ಹಾಗೂ ಅತ್ತಾವರ ಶಾಖೆಯು ಸ್ವಂತ ಕಟ್ಟಡದಲ್ಲಿ ಇದ್ದು ಹಾಗೇಯೇ ಸಂಘದ ಉಳ್ಳಾಲ, ಬಿಕರ್ಣಕಟ್ಟೆ, ಮಾರ್ಕೆಟ್ ರೋಡ್ ಶಾಖೆಗಳು ಸಂಘದ ಸ್ವಂತ ಕಛೇರಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

1992ರಲ್ಲಿ ಸಂಘವು 500 ಮಂದಿ ಸದಸ್ಯರೊಂದಿಗೆ ಹಾಗೂ ರೂ. 3 ಲಕ್ಷ ಪಾಲು ಬಂಡವಾಳದೊಂದಿಗೆ ಆರಂಭಿಸಿದ ಸಂಸ್ಥೆಯು ಪ್ರಸ್ತುತ 4500 ಎ ವರ್ಗದ ಸದಸ್ಯರನ್ನು ಹೊಂದಿದ್ದು 11.50 ಕೋಟಿ ಪಾಲು ಬಂಡವಾಳ 159 ಕೋಟಿ ಠೇವಣಿ, 101 ಕೋಟಿ ವಿವಿಧ ಸಾಲದ ರೂಪದಲ್ಲಿ ನೀಡಲಾಗಿದೆ. ಹಾಗೂ 198 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿರುತ್ತದೆ.

ಸಂಘವು 2021-22ನೇ ಸಾಲಿನಲ್ಲಿ ರೂ. 5.87 ಕೋಟಿಯಷ್ಟು ಲಾಭವನ್ನು ಗಳಿಸಿದ್ದು 2020-21ನೇ ಸಾಲಿನಲ್ಲಿ ಶೇ.20 ಪಾಲು ಮುನಾಫೆಯನ್ನು ಸದಸ್ಯರಿಗೆ ವಿತರಿಸಲಾಗಿದೆ. ಸಂಘವು ಕಳೆದ 26 ವರ್ಷಗಳಿಂದ ಲೆಕ್ಕ ಪರಿಶೋಧನೆಯಲ್ಲಿ "ಎ" ವರ್ಗವನ್ನು ಹೊಂದಿರುತ್ತದೆ. ಪ್ರಸ್ತುತ ಸಂಘದ ಅಧ್ಯಕ್ಷರಾಗಿ ಶ್ರೀ ಎ.ಎಸ್.ವೆಂಕಟೇಶ್ ಹಾಗೂ ಉಪಾಧ್ಯಕ್ಷರಾಗಿ ಶ್ರೀ ರಮೇಶ್ ಮೆಂಡನ್. ಟಿ ಅವರು ಮಾರ್ಗದರ್ಶನ ಮಾಡುತ್ತಿದ್ದಾರೆ.

**ಪ್ರಶಸ್ತಿಗಳು :** ಸಂಘದ ಈ ಸಾಧನೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿಯ ವತಿಯಿಂದ 2007ರಲ್ಲಿ ಮೈಸೂರಿನಲ್ಲಿ ಜರುಗಿದ ಸಹಕಾರ ಚಳುವಳಿಯ ಶತಮಾನೋತ್ಸವ ಮುಕ್ತಾಯ ಸಮಾರಂಭದಲ್ಲಿ ಸೊಸೈಟಿಗೆ ರಾಜ್ಯದ "ಉತ್ತಮ ಸಹಕಾರ ಸಂಘ ಪ್ರಶಸ್ತಿ" ನೀಡಿ ಗೌರವಿಸಲಾಗಿದೆ.

ಸೊಸೈಟಿಯು ಸಹಕಾರ ರಂಗದಲ್ಲಿ ಸಲ್ಲಿಸುತ್ತಿರುವ ಸೇವೆ ಹಾಗೂ ಕಾರ್ಯಸಾಧನೆಯನ್ನು ಗುರುತಿಸಿ, ಬಾಗಲಕೋಟೆಯಲ್ಲಿ ನಡೆದ 64ನೇ ಅಖಿಲ ಭಾರತ ಸಹಕಾರ ಸಪ್ತಾಹ 2017ರ ಸಮಾರಂಭದಲ್ಲಿ ಸೊಸೈಟಿಯು "ಉತ್ತಮ ಸಹಕಾರ ಸಂಘ ರಾಜ್ಯ ಪ್ರಶಸ್ತಿ"ಯನ್ನು ಪಡೆದಿರುತ್ತದೆ.

ಸೊಸೈಟಿಯ ಕಾರ್ಯಸಾಧನೆಯನ್ನು ಪರಿಗಣಿಸಿ ತಾರೀಕು 15-11-2017ರಂದು ಮಂಗಳೂರಿನಲ್ಲಿ ನಡೆದ 64ನೇ ಅಖಿಲ ಭಾರತ ಸಹಕಾರ ಸಪ್ತಾಹದ ದಿನಾಚರಣೆಯ ಸಮಾರಂಭದಲ್ಲಿ ಸಂಘಕ್ಕೆ 2017-18ನೇ ಸಾಲಿನ "ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ" ಹಾಗೂ ದ ಕ ಜಿಲ್ಲಾ ಕೇಂದ್ರ ಬ್ಯಾಂಕಿನ ಮಹಾಸಭೆಯಲ್ಲಿ ನಮ್ಮ ಸೊಸೈಟಿಗೆ "ಸಾಧನಾ ಪ್ರಶಸ್ತಿ 2016-2017" ನ್ನು ಪಡೆಯಲಾಗಿದೆ.

ಗ್ರಾಹಕರ ಬೇಡಿಕೆಗಳಿಗೆ ತ್ವರಿತವಾಗಿ ಸ್ಪಂದಿಸುವ ನಿಟ್ಟಿನಲ್ಲಿ ಹಾಗೂ ಒಂದು ಶಾಖೆಯ ಗ್ರಾಹಕನು ಇನ್ನೊಂದು ಶಾಖೆಗೆ ಹೋಗಿ ವ್ಯವಹಾರ ಮಾಡಲು ಅನುಕೂಲವಾಗುವಂತೆ ಸಂಘದ ಎಲ್ಲಾ ಶಾಖೆಗಳಿಗೆ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

# ಎರಡು ದಶಕಗಳ ಸದಸ್ಯ ಸೇವೆಯಲ್ಲಿ ಚಿತ್ರದುರ್ಗದ ವೀರಶೈವ ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ






"ಸರ್ವರಿಗೂ ಸಮಪಾಲು – ಸರ್ವರಿಗೂ ಸಮಬಾಳು" ಎಂಬ ಸಹಕಾರ ತತ್ವದಂತೆ ಸದಸ್ಯರ ಏಳಿಗೆಗಾಗಿ ಚಿತ್ರದುರ್ಗ ನಗರದಲ್ಲಿ ದಿನಾಂಕ : 03/08/2001 ರಂದು 500 ಜನ ಸದಸ್ಯರ ರೂ.10ಲಕ್ಷ ಷೇರು ಬಂಡವಾಳದೊಂದಿಗೆ ವೀರಶೈವ ಪತ್ತಿನ ಸಹಕಾರ ಸಂಘವನ್ನು ಸಮಾನ ಮನಸ್ಸಿನ ಸಹಕಾರಿಗಳೊಂದಿಗೆ ಜೆ.ಎಂ. ಜಯಕುಮಾರ್ ರವರ ಅಧ್ಯಕ್ಷತೆಯಲ್ಲಿ ಸಂಘವನ್ನು ಪ್ರಾರಂಭಿಸಲಾಯಿತು. ಪ್ರಸ್ತುತ ಸಂಘದ ಅಧ್ಯಕ್ಷರಾಗಿ ಶಿವಕುಮಾರ್ ಪಟೇಲ್, ಉಪಾಧ್ಯಕ್ಷರಾಗಿ ಜಿ.ಟಿ. ಸುರೇಶ್ ಅವರು ಮಾರ್ಗದರ್ಶನ ಮಾಡುತ್ತಿದ್ದಾರೆ.

ಸಣ್ಣ ಪ್ರಮಾಣದ ದುಡಿಯುವ ಬಂಡವಾಳದೊಂದಿಗೆ ಪ್ರಾರಂಭವಾದ ಈ ಸಹಕಾರ ಸಂಘವು 2008–09 ಸಾಲಿನಲ್ಲಿ ವ್ಯವಹಾರಗಳನ್ನು ಗಣಕೀಕರಣಗೊಳಿಸಲಾಯಿತು. 2012ರಲ್ಲಿ ದಶಮಾನೋತ್ಸವ ಆಚರಿಸುವ ಜೊತೆಗೆ ಸ್ವಂತ ಕಟ್ಟಡ ಉದ್ಘಾಟನೆಗೊಂಡಿತು.

ಸದಸ್ಯ ಸೇವೆಗಳ ಜೊತೆಗೆ ರಾಷ್ಟ್ರೀಕೃತ ಬ್ಯಾಂಕ್‌ಗೆ ನೆಲ ಮಳಿಗೆಯಲ್ಲಿ ಬಾಡಿಗೆ ನೀಡಿ ಸಂಘಕ್ಕೆ ಮಾಸಿಕವಾಗಿ ಆದಾಯ ಬರುವಂತೆ ಮಾಡಲಾಗಿದೆ. ಅಷ್ಟೇ ಅಲ್ಲದೆ, 2018–19ನೇ ಸಾಲಿನಲ್ಲಿ ಸಂಘವು ಒಂದು ಉತ್ತಮ ಸದುದ್ದೇಶಕ್ಕೆ 60X185 ಅಳತೆಯ ನಿವೇಶನ ಖರೀದಿಸಿದೆ. 2021–22ನೇ ಸಾಲಿಗೆ 1736 ಜನ ಸದಸ್ಯರು ರೂ.78,37,800/– ಷೇರು ಬಂಡವಾಳದೊಂದಿಗೆ ರೂ.76,06,276.44 ನಿವ್ವಳ ಲಾಭಗಳಿಸಿದೆ. ಸಂಘವು ಪ್ರಾರಂಭಗೊಂಡ ವರ್ಷದಿಂದಲೂ ಸದಸ್ಯರಿಗೆ ಡಿವಿಡೆಂಡ್ ವಿತರಿಸುತ್ತ ಬರುತ್ತಿದ್ದು, ಕಳೆದ 8–ವರ್ಷದಿಂದ 15%, 8–ವರ್ಷದಿಂದ 20%ರಂತೆ ಡಿವಿಡೆಂಡ್ ವಿತರಿಸುತ್ತಿರುವುದು ಸಂತಸದ ವಿಚಾರವಾಗಿದೆ.

**ಸಂಘದ ಪ್ರಗತಿಯ ಪಕ್ಷಿ ನೋಟ (ರೂ.ಲಕ್ಷಗಳಲ್ಲಿ)**

| ಕ್ರ.ಸಂ. | ವಿವರಗಳು | 2013–14 | 2017–18 | 2021–22 |
|---|---|---|---|---|
| 1 | ಸದಸ್ಯತ್ವ | 1478 | 1648 | 1736 |
| 2 | ಷೇರು ಬಂಡವಾಳ | 59.76 | 74.24 | 78.37 |
| 3 | ಕಾಯ್ದಿಟ್ಟ ನಿಧಿ | 38.11 | 93.81 | 230.36 |
| 4 | ಇತರೆ ನಿಧಿಗಳು | 97.28 | 217.80 | 327.21 |
| 5 | ಠೇವಣಿಗಳು | 642.00 | 1008.51 | 1149.89 |
| 6 | ಹೂಡಿಕೆಗಳು | 214.69 | 400.26 | 481.03 |
| 7 | ಸಾಲಗಳು | 510.36 | 809.43 | 1059.23 |
| 8 | ದುಡಿಯುವ ಬಂಡವಾಳ | 841.30 | 1401.22 | 1731.79 |
| 9 | ನಿವ್ವಳ ಲಾಭ | 34.87 | 68.08 | 76.06 |
| 10 | ಡಿವಿಡೆಂಡ್ | 18% | 20% | 20% |
| 11 | ಆಡಿಟ್ ವರ್ಗೀಕರಣ | "ಎ" | "ಎ" | ಸೂಚಿತ "ಎ" |




ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹ ಧನ, ಒಂದು ಬೆಳ್ಳಿಯ ಪದಕ, ಮತ್ತು ಅಭಿನಂದನಾ ಪತ್ರ ನೀಡಿ ಸನ್ಮಾನಿಸಿ ವಿದ್ಯಾರ್ಜನೆಗೆ ಉತ್ತೇಜನ ನೀಡಲಾಗುತ್ತಿದೆ.

ಪ್ರತಿ ವರ್ಷ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹ ಧನ, ಒಂದು ಬೆಳ್ಳಿಯ ಪದಕ, ಮತ್ತು ಅಭಿನಂದನಾ ಪತ್ರ ನೀಡಿ ಸನ್ಮಾನಿಸಿ ವಿದ್ಯಾರ್ಜನೆಗೆ ಉತ್ತೇಜನ ನೀಡಲಾಗುತ್ತಿದೆ. ಸಂಘದ ಮೃತಸದಸ್ಯರ ಕುಟುಂಬದ ವಾರಸುದಾರರಿಗೆ ಮರಣೋತ್ತರ ನಿಧಿಯಿಂದ ತಲಾ ರೂ.5,000/– ರಂತೆ ಪಾವತಿಸಿ, ಮೃತಸದಸ್ಯರ ಕುಟುಂಬದ ದುಃಖದಲ್ಲಿ ಸಂಘವು ಭಾಗಿಯಾಗಿರುತ್ತದೆ. ಪ್ರತಿ ವರ್ಷದ ವಾರ್ಷಿಕ ಮಹಾಸಭೆಗಳಲ್ಲಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಆಡಳಿತ ಮಂಡಲಿಯವರ ಕಾರ್ಯ ವೈಖರಿಗಳನ್ನು ಅವಲೋಕಿಸಿ, ಅಗತ್ಯ ಬಿದ್ದಲ್ಲಿ ಉತ್ತಮ ಸಲಹೆ ಸೂಚನೆಗಳನ್ನು ಕೊಡುತ್ತಿರುವುದು ಈ ಸಂಘದ ಸದಸ್ಯರ ಮತ್ತೊಂದು ವಿಶೇಷ ಗುಣ.ಸಂಘದ ಉತ್ತಮ ಸೇವೆಯನ್ನು ಗುರುತಿಸಿ ಸಹಕಾರ ಭಾರತಿ ಇವರ ಆಶ್ರಯದಲ್ಲಿ ಗೋವಾದಲ್ಲಿ ನಡೆದ "ಅಖಿಲ ಭಾರತ ಸಹಕಾರ ಮಹಾ ಅಧಿವೇಶನದಲ್ಲಿ ಕರ್ನಾಟಕ ರಾಜ್ಯ "ಅತ್ಯುತ್ತಮ ಶ್ರೇಷ್ಠ ಸಹಕಾರಿ" ಸಂಘ ಎಂದು ಪ್ರಶಸ್ತಿಯನ್ನು ಸಂಘಕ್ಕೆ ನೀಡಿ ಗೌರವಿಸಿದೆ. ಚಿತ್ರದುರ್ಗ ಜಿಲ್ಲಾ ಸಹಕಾರ ಯೂನಿಯನ್ ನಿ., ಚಿತ್ರದುರ್ಗ ಇವರ ಆಶ್ರಯದಲ್ಲಿ ಸಂಘದ ಅಧ್ಯಕ್ಷರಾದ ಜೆ.ಎಂ. ಜಯಕುಮಾರ್ ಇವರಿಗೆ "ಶ್ರೇಷ್ಠ ಸಹಕಾರಿ" ಪ್ರಶಸ್ತಿಯನ್ನು ನೀಡಿ ಗೌರವಿಸಿರುತ್ತದೆ. 2017–18, 2018–19ನೇ ಸಾಲಿನ ಕರ್ನಾಟಕ ಸ್ಟೇಟ್ ಕ್ರೆಡಿಟ್

## ಆಡಳಿತ ಮಂಡಳಿ



**ಶಿವಕುಮಾರ್ ಪಟೇಲ್**
ಅಧ್ಯಕ್ಷರು



**ಜಿ.ಟಿ. ಸುರೇಶ್**
ಉಪಾಧ್ಯಕ್ಷರು


**ನಿರ್ದೇಶಕರು**
ಪರಮೇಶ್ವರಪ್ಪ, ಟಿ. ಮಹಾಂತೇಶ್, ಜಯಶ್ರೀ, ಎಸ್.ವಿ. ನಾಗರಾಜಪ್ಪ, ಎಸ್. ಷಣ್ಮುಖಪ್ಪ, ಡಿ.ಎಸ್. ಮಲ್ಲಿಕಾರ್ಜುನ್, ಬಿ.ಎಂ. ಕರಿಬಸವಯ್ಯ, ಸಿ. ಚಂದ್ರಪ್ಪ, ಆರ್. ಶೈಲಜಾ

ಕೋ ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್ (ರಿ) ಇವರ ವತಿಯಿಂದ "ಸಹಕಾರ ಶ್ರೀ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**ಸೌಲಭ್ಯಗಳು : ಸದಸ್ಯರಿಗೆ ಅವಶ್ಯಕತೆಗೆ ಅನುಗುಣವಾಗಿ ತ್ವರಿತ ಸಾಲ ವಿತರಣೆ.**

1. ಗೃಹ ನಿರ್ಮಾಣಕ್ಕೆ ಸಾಲ.
2. ಸದಸ್ಯರಿಗೆ ಲಾಕರ್ ಸೌಲಭ್ಯ.
3. ಕಟ್ಟಡ ಆಧಾರ ಸಾಲ.
4. ಇ–ಛಾಪಾ ಕಾಗದ ವ್ಯವಸ್ಥೆ.
5. ವಾಹನ ಸಾಲ.
6. ಇತರೆ ಆಧಾರ ಸಾಲ.

ಹೀಗೆ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಏಳ್ಗೆಗೆ ಆಡಳಿತ ಮಂಡಲಿಯ ಸಕಾರಾತ್ಮಕ ಮಾರ್ಗದರ್ಶನ, ನಿಸ್ವಾರ್ಥ ಸೇವೆ, ಸರ್ವ ಸದಸ್ಯರ, ಗ್ರಾಹಕರ ಹಾಗೂ ಹಿತೈಷಿಗಳ ಸಹಕಾರವೇ ಕಾರಣವಾಗಿದೆ. ಹೀಗೆ, ಸಂಘದ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಏಳ್ಗೆಗೆ ಆಡಳಿತ ಮಂಡಲಿಯ ಸಕಾರಾತ್ಮಕ ಮಾರ್ಗದರ್ಶನ, ನಿಸ್ವಾರ್ಥ ಸೇವೆ, ಸರ್ವ ಸದಸ್ಯರ, ಗ್ರಾಹಕರ ಹಾಗೂ ಹಿತೈಷಿಗಳಸಹಕಾರವೇ ಕಾರಣವಾಗಿದೆ.



# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

... ಹಿಂದಿನ ಸಂಚಿಕೆಯಿಂದ

**ಉಳಿತಾಯ ಮತ್ತು ಚಾಲ್ತಿ ಖಾತೆಗಳು :** ಸಾರ್ವಜನಿಕರಲ್ಲಿ ವೈಯಕ್ತಿಕ ಉಳಿತಾಯವನ್ನು ಪ್ರೇರಿಸಲು ಎಲ್ಲ ಬ್ಯಾಂಕುಗಳೂ ಉಳಿತಾಯ ಬ್ಯಾಂಕ್ ಖಾತೆಗಳನ್ನು (SB A/cs) ತೆರಯುವ ಸೌಲಭ್ಯ ಕಲ್ಪಿಸಿವೆ. ಉಳಿತಾಯ ಖಾತೆಗಳು ಎರಡು ವಿಧ: ಚೆಕ್ ಸೌಲಭ್ಯ ಇರುವ ಖಾತೆ ಹಾಗೂ ಚೆಕ್ ಸೌಲಭ್ಯ ಇಲ್ಲದಿರುವ ಖಾತೆ. ಚೆಕ್ ಸೌಲಭ್ಯ ಇಲ್ಲದ ಖಾತೆಗಳಲ್ಲಿ ಠೇವಣಿದಾರರು ಬ್ಯಾಂಕು ನೀಡುವ ಹಣ ಹಿಂಪಡೆ ಪತ್ರವನ್ನು ತುಂಬಿ ಹಣ ಪಡೆಯಬಹುದು. ವರ್ಷವೊಂದರಲ್ಲಿ ಎಷ್ಟು ಬಾರಿ ಬೇಕಾದರೂ ಈ ಖಾತೆಗಳಿಗೆ ನಗದು/ಚೆಕ್ ರೂಪದಲ್ಲಿ ಜಮಾ ಮಾಡಬಹುದು. ಆದರೆ ಹಣವನ್ನು ಚೆಕ್/ಹಣ ಹಿಂಪಡೆ ಪತ್ರ ಅಥವಾ ಎ.ಟಿ.ಎಂ. ಕಾರ್ಡುಗಳ ಮೂಲಕ ಪಡೆದುಕೊಳ್ಳುವ ವಹಿವಾಟುಗಳನ್ನು ಮಿತಗೊಳಿಸಲು ಚೆಕ್ ನೀಡಿಕೆಗೆ, ಎ.ಟಿ.ಎಂ. ಕಾರ್ಡಿನ ವಹಿವಾಟುಗಳಿಗೆ ಕೊಂಚ ಶುಲ್ಕ ವಿಧಿಸುವ ಪದ್ಧತಿಯಿದೆ. ಉಳಿತಾಯ ಖಾತೆಯನ್ನು ತೆರೆಯಲು ಬ್ಯಾಂಕು ವಿಧಿಸಿರುವ ಕನಿಷ್ಠ ಮೊತ್ತದ ಹಣವು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಬೇರೆ ಬೇರೆಯಾಗಿರುತ್ತದೆ. ಚೆಕ್ ಸೌಲಭ್ಯವುಳ್ಳ ಖಾತೆಗಳಿಗೆ ವಿಧಿಸಲಾಗುವ ಕನಿಷ್ಠ ಶಿಲ್ಕು ಇತರ ಖಾತೆಗಳ ಕನಿಷ್ಠ ಶಿಲ್ಕಿಗಿಂತ ಅಧಿಕವಾಗಿರುತ್ತದೆ. ಸಾಮಾನ್ಯವಾಗಿ ಬ್ಯಾಂಕುಗಳು ಚೆಕ್ ಸೌಲಭ್ಯ ಖಾತೆಗಳಿಗೆ 500/– ರಿಂದ ರೂ.1000/– ರೂ. ವರೆಗೆ ಕನಿಷ್ಠ ಶಿಲ್ಕನ್ನು ನಿಗದಿ ಪಡಿಸುತ್ತವೆ. ಭಾರತದಲ್ಲಿ ಕಾರ್ಯ ನಿರ್ವಹಿಸುವ ವಿದೇಶೀ ಬ್ಯಾಂಕುಗಳು ಈ ಕನಿಷ್ಠ ಮೊತ್ತವನ್ನು ರೂ.25,000/– ಎಂದು ನಿಗದಿ ಮಾಡಿವೆ. ಕಾಲಕಾಲಕ್ಕೆ ಈ ಕನಿಷ್ಠ ಶಿಲ್ಕಿನ ಮೊತ್ತದಲ್ಲಿ ಬದಲಾವಣೆಗಳಾಗುತ್ತವೆ. ರಿಸರ್ವ್ ಬ್ಯಾಂಕಿನ ನಿರ್ದೇಶದಂತೆ ಉಳಿತಾಯ ಖಾತೆಗಳ ಶಿಲ್ಕುಗಳಿಗೆ ಬ್ಯಾಂಕುಗಳು ಸದ್ಯಕ್ಕೆ ಕನಿಷ್ಠ ಶೇ.4 ರಷ್ಟು ಬಡ್ಡಿ ನೀಡುತ್ತಿವೆ. ಕೆಲವು ಬ್ಯಾಂಕುಗಳು ಇನ್ನೂ ಹೆಚ್ಚಿನ ಬಡ್ಡಿದರ ನೀಡುವುದೂ ಇದೆ. ಉಳಿತಾಯ ಖಾತೆಗಳ ದೈನಂದಿನ ಶಿಲ್ಕುಗಳ ಮೇಲೆ ಲೆಕ್ಕ ಹಾಕಲಾಗುವ ಈ ಬಡ್ಡಿಯನ್ನು ಮೂರು ತಿಂಗಳಿಗೊಮ್ಮೆ ಖಾತೆಗೆ ಜಮಾ ಮಾಡಲಾಗುವುದು.

ವಹಿವಾಟುಗಳನ್ನು ನಡೆಸಲು ಅನುಕೂಲಕರವಾದ ಇನ್ನೊಂದು ಬಗೆಯ ಖಾತೆಗಳೂ ಇವೆ: ಚಾಲ್ತಿ ಖಾತೆಗಳು (Current Accounts). ಈ ಖಾತೆಗಳಲ್ಲಿ ಜಮಾ ಅಥವಾ ಖರ್ಚಿನ ವಹಿವಾಟುಗಳ ಸಂಖ್ಯೆಗೆ ಮಿತಿಯಿರುವುದಿಲ್ಲ. ಇವುಗಳಲ್ಲಿರಿಸಿದ ಹಣಕ್ಕೆ ಬ್ಯಾಂಕು ಬಡ್ಡಿಯನ್ನೂ ಕೊಡುವುದಿಲ್ಲ. ಉಳಿತಾಯ ಖಾತೆಗಳಿಗೆ ನೀಡುವಂತೆ ಪಾಸ್ ಪುಸ್ತಕ ನೀಡಲಾಗುವುದಿಲ್ಲ. ಖಾತೆದಾರರು ತಮ್ಮ ವಹಿವಾಟುಗಳ ವಿವರಗಳನ್ನು ಕಾಲಕಾಲಕ್ಕೆ ಬ್ಯಾಂಕ್ ನೀಡುವ ತಃಖ್ತೆಗಳ ಮೂಲಕ ತಿಳಿದುಕೊಳ್ಳಬಹುದು. ಚಾಲ್ತಿ ಖಾತೆಗಳಲ್ಲಿ ಮೀರೆಳೆತದ (ಓವರ್ ಡ್ರಾಫ್ಟ್) ಸೌಲಭ್ಯವೂ ಇರುತ್ತದೆ. ಇದರಿಂದ ಖಾತೆಯಲ್ಲಿ ಹಣವಿಲ್ಲದಿದ್ದರೂ ಸಾಲದ ರೂಪದಲ್ಲಿ ಹಣ ಪಡೆಯಲು ಖಾತೆದಾರರಿಗೆ ನೆರವಾಗುತ್ತದೆ. ಬ್ಯಾಂಕಿಗೆ ಪ್ರತ್ಯೇಕವಾಗಿ ಅರ್ಜಿಸಲ್ಲಿಸಿ ಮೀರೆಳತ ಸೌಲಭ್ಯವನ್ನು ಮಂಜೂರು ಮಾಡಿಸಿಕೊಳ್ಳಬೇಕಾಗುತ್ತದೆ. ವ್ಯವಹಾರ ನಡೆಸುವವರಿಗೆ ಇಂಥ ಖಾತೆಗಳು ಉಪಯುಕ್ತವೆನಿಸಿದೆ.

ಉಳಿತಾಯ ಬ್ಯಾಂಕ್ ಅಥವಾ ಚಾಲ್ತಿ ಖಾತೆಯ ಚೆಕ್ ಪುಸ್ತಕವನ್ನು ಬ್ಯಾಂಕಿನವರಿಂದ ಕೇಳಿ ಅಥವಾ ಇಂಟರ್‌ನೆಟ್‌ನಲ್ಲಿ ಸಂದೇಶ ಕಳಿಸಿ ಪಡೆಯಬಹುದು. ಈ ಚೆಕ್ಕುಗಳ ಮೂಲಕ ಖಾತೆಯಿಂದ ಹಣ ಪಡೆಯಬಹುದು ಅಥವಾ ಇತರರಿಗೆ ಹಣ ಪಾವತಿ ಮಾಡಬಹುದು. ಚೆಕ್ ಪುಸ್ತಕವನ್ನು ನೀಡಲು ಶುಲ್ಕ ವಿಧಿಸಲಾಗುವುದು. ಉಳಿತಾಯ ಖಾತೆಯಲ್ಲಿ ಮೀರೆಳೆತದ (overdraft) ಸೌಲಭ್ಯ ಇರುವುದಿಲ್ಲ. ಎಲ್ಲ ಬ್ಯಾಂಕುಗಳೂ ಈಗ ಎ.ಟಿ.ಎಂ.ಗಳನ್ನು ಹೊಂದಿವೆ. ಗ್ರಾಹಕರು ಈ ಯಂತ್ರಗಳ ಮೂಲಕ ಹಣ ಪಡೆಯಲು ಎ.ಟಿ.ಎಂ.ಕಾರ್ಡುಗಳನ್ನು ನೀಡಲಾಗುವುದು. ಎ.ಟಿ.ಎಂ.ಕಾರ್ಡುಗಳಿಂದ ಶಾಲಾ ಶುಲ್ಕ, ಪ್ರಯಾಣ ಟಿಕೆಟ್ ದರ, ಪೆಟ್ರೋಲ್ ಬಿಲ್, ವಿದ್ಯುತ್, ನೀರು, ದೂರವಾಣಿ ಮುಂತಾದ ಬಿಲ್ಲುಗಳ ಪಾವತಿಗಳು, ಗೃಹ ತೆರಿಗೆ, ಆದಾಯ ತೆರಿಗೆ ಮುಂತಾದ ಇತರ ಪಾವತಿಗಳು, ದೇಶಾದ್ಯಂತ ವಿವಿಧ ಮಾರಾಟ ಸ್ಥಳಗಳಲ್ಲಿ ವಸ್ತು ಖರೀದಿ, ಸಿನೆಮಾ/ನಾಟಕ ಮುಂತಾದವುಗಳ ವೀಕ್ಷಣೆಗೆ ಸ್ಥಳ ಕಾಯ್ದಿರಿಸುವಿಕೆ ಮುಂತಾದ ಇತರ ರೀತಿಯ ಅನುಕೂಲಗಳೂ ಇರುತ್ತವೆ.

ವಾಣಿಜ್ಯ ಬ್ಯಾಂಕುಗಳಲ್ಲಿ ಗ್ರಾಹಕರಿಗೆ ಅಂತರ್ಜಾಲ ಬ್ಯಾಂಕಿಂಗ್ (internet banking) ಸೌಲಭ್ಯ ಉಂಟು. ಖಾತೆಗಳಲ್ಲಿನ ಶಿಲ್ಕನ್ನು/ ವಹಿವಾಟುಗಳನ್ನು ತಿಳಿದುಕೊಳ್ಳಲು, ವಹಿವಾಟುಗಳ ತಃಖ್ತೆ (statement) ಗಳನ್ನು ಮುದ್ರಿಸಿಕೊಳ್ಳಲು, ಚೆಕ್ ಪುಸ್ತಕ ಅಥವಾ ಡ್ರಾಫ್ಟ್‌ಗೆ ಕೋರಿಕೆ ಸಲ್ಲಿಸಲು ಮತ್ತು ಅದೇ ಬ್ಯಾಂಕಿನಲ್ಲಿ ಅಥವಾ ಬೇರೆ ಬ್ಯಾಂಕುಗಳಲ್ಲಿರುವ ತನ್ನ ಅಥವಾ ಇತರರ ಖಾತೆಗಳಿಗೆ ಹಣವನ್ನು ವರ್ಗಾವಣೆ ಮಾಡುವುದು, ವಿದ್ಯುತ್, ಫೋನು ಹಾಗೂ ನೀರಿನ ಬಿಲ್ಲುಗಳ ಪಾವತಿ ಮುಂತಾದ ಸೌಲಭ್ಯಗಳು ಅಂತರ್ಜಾಲ ಬ್ಯಾಂಕಿಂಗ್ ಮೂಲಕ ದೊರೆಯುತ್ತದೆ. ಗ್ರಾಹಕರು ಬ್ಯಾಂಕಿಗೆ ಹೋಗುವ ಅಗತ್ಯವಿಲ್ಲದೆ ತಮ್ಮ ಮನೆ ಅಥವಾ ಕಚೇರಿಯಲ್ಲಿ ಕುಳಿತು ಗಣಕದ ನೆರವಿನಿಂದ ಅಂತರ್ಜಾಲದ (internet) ಮೂಲಕ ಈ ಕೆಲಸಗಳನ್ನು ತಾವೇ ಮಾಡಿಕೊಳ್ಳಬಹುದು.

### ಕ್ಲೇಟನ್ನನ ನಿಯಮ [Clayton's Rule]

ಸಾಲಗಾರನೊಬ್ಬನು ಬ್ಯಾಂಕಿನಿಂದ ಒಂದಕ್ಕಿಂತ ಹೆಚ್ಚಿನ ಸಾಲಗಳನ್ನು ತೆಗೆದುಕೊಂಡಿದ್ದಾಗ, ಸಾಲಗಾರನು ಮಾಡುವ ಜಮಾ ಹಣವು ಯಾವ ಸಾಲ ಖಾತೆಗೆ ಸೇರಬೇಕೆಂಬುದನ್ನು ಸಾಲಿಗನಿಗೆ (ಎಂದರೆ, ಬ್ಯಾಂಕಿಗೆ) ತಿಳಿಸಬೇಕು. [ಯಾವ ಖಾತೆಗೆ ಬೇಕಾದರೂ ಜಮಾ ಮಾಡುವ ಹಕ್ಕು ಅವನಿಗೆ ಇರುತ್ತದೆ]. ಒಂದು ವೇಳೆ ಸಾಲಗಾರನು ಯಾವ ಖಾತೆಗೆ ಹಣ ಸೇರಬೇಕೆಂದು ಸೂಚಿಸದೆ ಹಣವನ್ನು ಕಟ್ಟಿದರೆ, ಹಾಗೆ ಕಟ್ಟಿದ ಹಣವನ್ನು ಯಾವ ಖಾತೆಗೆ ಉತ್ತಾರ ಹಾಕಿಕೊಳ್ಳಬೇಕೆಂಬುದನ್ನು ಬ್ಯಾಂಕೇ ನಿರ್ಧರಿಸಬಹುದು. ಋಣಿಯಾಗಲೀ ಧನಿಯಾಗಲೀ ಈ ಹಕ್ಕನ್ನು ಚಲಾಯಿಸದೆ ಹೋದರೆ ಜಮಾ ಮಾಡಿದ ಹಣವು ಕಾಲಾನುಕ್ರಮದಲ್ಲಿ ಆ ಸಾಲಗಳಲ್ಲಿ ಅತ್ಯಂತ ಹಳೆಯ ಋಣಕ್ಕೆ ಸಂದಾಯವಾಗಿದೆ ಎಂದು ಭಾವಿಸಬಹುದು.

ಗ್ರಾಹಕನ ಹೆಸರಿನಲ್ಲಿ ಒಂದು ಚಾಲ್ತಿ ಖಾತೆ ಇರುವಾಗ ಯಾವ ನಿರ್ದಿಷ್ಟ ಸೂಚನೆಯನ್ನೂ ನೀಡದೆ ಹಣವನ್ನು ಕಟ್ಟಿದಾಗ ಮತ್ತು ತೆಗೆದಾಗ ಯಾವ ನಿಯಮವನ್ನು ಪಾಲಿಸಬೇಕೆಂಬುದಕ್ಕೆ ಸ್ಪಷ್ಟವಾದ ನಿರ್ದೇಶಗಳು ಮೊದಲು ಇರಲಿಲ್ಲ. ನಥೇನಿಯಲ್ ಕ್ಲೇಟನ್ ಮತ್ತು ಡೇವಯನಿಸ್ ಎಂಬ ಇಬ್ಬರು ಪಾಲುದಾರರಿದ್ದ ಪಾಲುದಾರಿಕೆ ಸಂಸ್ಥೆಯ ಚಾಲ್ತಿ ಖಾತೆಗೆ ಸಂಬಂಧಿಸಿದಂತೆ ಪ್ರಕರಣವೊಂದು ಇಂಗ್ಲೆಂಡಿನ ನ್ಯಾಯಾಲಯದಲ್ಲಿ ಬಂತು. ಆ ಪ್ರಕರಣದ ನ್ಯಾಯಾಧೀಶರಾಗಿದ್ದ ವಿಲಿಯಂ ಗ್ರ್ಯಾಂಟ್ ಅವರು ನೀಡಿದ ಮಹತ್ವದ ತೀರ್ಪಿನಲ್ಲಿ ಇಂತಹ ಪ್ರಶ್ನೆಗೆ ಖಚಿತವಾದ ಉತ್ತರ ದೊರೆತಿದೆ. ಪ್ರಕರಣದಲ್ಲಿ ಮೃತ ಪಾಲುದಾರ ಡೇವಯನಿಸ್‌ನ ಮಗ ಒಬ್ಬ ಕಕ್ಷಿಯಾಗಿದ್ದು ತೀರ್ಪು ಕ್ಲೇಟನ್‌ನ ವಿರುದ್ಧವಾಗಿತ್ತು.

ನಥೇನಿಯಲ್ ಕ್ಲೇಟನ್ ಪ್ರಕರಣದ ತೀರ್ಪಿನಂತೆ 'ಒಂದು ಚಾಲ್ತಿ ಖಾತೆಯಲ್ಲಿ ಋಣಿಕೆ ಶಿಲ್ಕು [debit balance] ಇದ್ದಾಗ, ಮೊದಲ ಜಮಾ ವಹಿವಾಟುಗಳು ಮೊದಲ ಖರ್ಚಿನ ವಹಿವಾಟುಗಳನ್ನು ಚುಕ್ತಾ ಮಾಡುತ್ತವೆ.' ಹೀಗಾಗಿ, ನಾವು ಮೇಲೆ ಚರ್ಚಿಸಿದ ಪ್ರಕರಣದಲ್ಲಿ ಪಾಲುಗಾರನು ಮರಣಿಸಿದ ನಂತರ ಖಾತೆಗೆ ಜಮಾ ಆದ ಮೊಬಲಗು ಅ ಇದ್ದಾಗ ನಡೆಸಿದ ಋಣಿಕೆ (ಡೆಬಿಟ್) ವಹಿವಾಟುಗಳನ್ನು ಚುಕ್ತಾ ಮಾಡುತ್ತವೆ. ಎಂದರೆ, ಪಾಲುದಾರನು ಅ ಸತ್ತನಂತರ ನಡೆದ ಖರ್ಚಿನ ವಹಿವಾಟುಗಳಿಗೆ ಅವನು (ಅವನ ಆಸ್ತಿ ಅಥವಾ ವಾರಸುದಾರರು) ಹೊಣೆಯಲ್ಲ ! ಈ ಪ್ರಸಿದ್ಧ ಪ್ರಕರಣದ ತೀರ್ಪಿನಿಂದ ಸಾಲದ ಬಾಕಿಗೆ ಜಮಾ ಆದ ಹಣದ ಮೊತ್ತವನ್ನು ಉತ್ತಾರ ಹಾಕಿಕೊಳ್ಳುವುದರ ಬಗೆಗೆ ಸ್ಥಾಪಿತವಾದ ನಿಯಮ 'ಕ್ಲೇಟನ್ನನ ನಿಯಮ' [Clayton's rule] ಎಂದೇ ಖ್ಯಾತವಾಗಿದೆ.

ಪಾಲುದಾರಿಕೆ ಸಂಸ್ಥೆಗಳಿಗೆ ಚಾಲ್ತಿಖಾತೆಗಳಲ್ಲಿ ಸಾಲ ನೀಡಿದ್ದು, ಪಾಲುದಾರರಲ್ಲಿ ಯಾರಾದರೂ ಪಾಲುದಾರಿಕೆಯಿಂದ ನಿವೃತ್ತರಾದ / ಮರಣ ಹೊಂದಿದ ಸಂದರ್ಭಗಳಲ್ಲಿ ಈ ನಿಯಮ ಅನ್ವಯವಾಗುವುದನ್ನು ನೆನಪಿಟ್ಟುಕೊಳ್ಳಬೇಕು. ಇಂಥ ಸನ್ನಿವೇಶಗಳಲ್ಲಿ ತಕ್ಷಣ ಬೇರೊಂದು ಹೊಸ ಖಾತೆಯನ್ನು ತೆರೆದು ಮುಂದಿನ ವಹಿವಾಟುಗಳನ್ನು ಆ ಖಾತೆಯಲ್ಲಿ ನಡೆಸುವ ಪದ್ಧತಿಯನ್ನು ಬ್ಯಾಂಕುಗಳು ಅನುಸರಿಸುತ್ತವೆ.

### ತಿರಸ್ಕೃತವಾದ ಚೆಕ್ಕು [Bounced Cheque]

ಸಾಕಷ್ಟು ಶಿಲ್ಕು ಇಲ್ಲದೆ ಚೆಕ್ಕು ನೀಡುವುದನ್ನು ತಪ್ಪಿಸಿ ಆ ಮೂಲಕ ಚೆಕ್ಕುಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಉದ್ದೇಶದಿಂದ 1989ರಲ್ಲಿ ಪರಕ್ರಾಮ್ಯ ಸಂಲೇಖಗಳ ಅಧಿನಿಯಮಕ್ಕೆ ಕೆಲವು ಹೊಸ ಪ್ರಕರಣಗಳನ್ನು ಸೇರಿಸಲಾಯಿತು [NI Act, 138-142]. ಈ ಅಧಿನಿಯಮದ 138ನೇ ಪ್ರಕರಣದಂತೆ 'ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೆ ಚೆಕ್ ನೀಡುವುದು ದಂಡಾರ್ಹ ಅಪರಾಧ. ಅಂಥ ಚೆಕ್ಕಿನ ರಚಕನಿಗೆ 2 ವರ್ಷ ಸಜಾ ಅಥವಾ/ಮತ್ತು ಚೆಕ್ಕಿನ ಹಣದ ಎರಡು ಪಟ್ಟು ಮೊತ್ತದವರೆಗೆ ದಂಡ ವಿಧಿಸಬಹುದು. ಸಾಲವೊಂದರ ಮರುಪಾವತಿಗಾಗಿ ಅಥವಾ ಯಾವುದೇ ಹೊಣೆಗಾರಿಕೆಯ ಪೂರೈಕೆಗಾಗಿ (ಉದಾ: ಖರೀದಿಸಿದ ವಸ್ತುವಿನ ಬೆಲೆ ಪಾವತಿ ಮಾಡಲು, ಪಡೆದ ಸೇವೆಗೆ ಹಣ ಸಂದಾಯಮಾಡಲು) ಚೆಕ್ಕನ್ನು ನೀಡಿದ್ದಾಗ ಮಾತ್ರ ಈ ಪ್ರಕರಣ ಅನ್ವಯವಾಗುತ್ತದೆ, ಇತರ ಸಂದರ್ಭಗಳಲ್ಲಿ ಅಲ್ಲ. ತಿರಸ್ಕೃತವಾದ ಚೆಕ್ಕಿನ ಮೊತ್ತವನ್ನು 15 ದಿನಗಳೊಳಗೆ ಪಾವತಿ ಮಾಡದಿದ್ದರೆ ತಾನು ಈ ಪ್ರಕರಣದಡಿ ಆತನ ಮೇಲೆ ಕ್ರಮ ಕೈಗೊಳ್ಳುವೆನೆಂದು ಚೆಕ್ಕಿನ ಪ್ರಾಪ್ತಿಕರ್ತನು [ಪೇಯೀ] ತನಗೆ ಚೆಕ್ಕನ್ನು ನೀಡಿದ ರಚಕನಿಗೆ [ಡ್ರಾಯರ್] ತಿಳುವಳಿಕೆ ಕೊಟ್ಟು, ಹಣ ಪಾವತಿಯಾಗದಿದ್ದಲ್ಲಿ, ಆ ಅವಧಿ ಮುಗಿದ ಒಂದು ತಿಂಗಳಿನೊಳಗೆ ನ್ಯಾಯಾಲಯದಲ್ಲಿ ದೂರು ಸಲ್ಲಿಸಬೇಕು. ಚೆಕ್ಕು 'ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ' ಎಂಬ ಕಾರಣಕ್ಕಾಗಿ ತಿರಸ್ಕೃತವಾಗಿರಬೇಕು. ಖಾತೆಯನ್ನು ಮುಕ್ತಾಯಗೊಳಿಸಿದ್ದರೂ ಅಥವಾ ಖಾತೆಯಲ್ಲಿ ಶಿಲ್ಕು ಇರಿಸದೆ ಚೆಕ್ಕಿನ ಪಾವತಿ ತಡೆ ಆದೇಶ ನೀಡಿದ್ದರೂ ಈ ಕಾನೂನಿನಂತೆ ಕ್ರಮ ತೆಗೆದುಕೊಳ್ಳಬಹುದು. ಕೇವಲ ವ್ಯಕ್ತಿಗಳಿಗೇ ಅಲ್ಲದೆ ಸಂಘ ಸಂಸ್ಥೆಗಳು, ಪಾಲುದಾರಿಕೆ ಸಂಸ್ಥೆ ಅಥವಾ ಕಂಪನಿಗಳಿಗೂ ಇದು ಅನ್ವಯವಾಗುತ್ತದೆ. ಸಂಸ್ಥೆಗಳ ಸಂದರ್ಭದಲ್ಲಿ ಚೆಕ್ಕಿಗೆ ಸಹಿಮಾಡಲು ಜವಾಬ್ದಾರರಾದ ಪದಾಧಿಕಾರಿಗಳು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

**ಉದ್ದರಿ ಖಾತರಿ ಸಂಸ್ಥೆ :** ಸಾಲನೀಡಿಕೆಗೆ ಬ್ಯಾಂಕುಗಳು ಸಾಮಾನ್ಯವಾಗಿ ಸಾಲಗಾರರಿಂದ ಭದ್ರತೆಯನ್ನು ಕೇಳುತ್ತಾರೆ. ಸಣ್ಣ ಉದ್ಯಮದಾರರಿಗೆ ಇದರಿಂದ ಬ್ಯಾಂಕುಗಳ ಸಾಲ ದೊರಕಿಸಿಕೊಳ್ಳುವಲ್ಲಿ ತೊಡಕಾಗುತ್ತದೆ. ಆಸ್ತಿರೂಪದ ಅಥವಾ ಮೂರನೇ ವ್ಯಕ್ತಿಯ ಜಾಮೀನಿನ ರೂಪದ ಭದ್ರತೆಯಿಲ್ಲದೆ ಸುಲಭವಾಗಿ ಬ್ಯಾಂಕಿನ ಸಾಲಗಳು ದೊರೆಯುವಂತಾಗಲು ಉದ್ದರಿ ವಿಲೇ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ಭಾರತ ಸರಕಾರವು ಉದ್ದರಿ ಖಾತರಿ ಯೋಜನೆ ಯನ್ನು ಆರಂಭಿಸಿದೆ. ಸರಕಾರ ಮತ್ತು ಭಾರತದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ ಸೇರಿ [SIDBI] ಅತಿಸಣ್ಣ ಮತ್ತು ಸಣ್ಣ ಉದ್ಯಮಿಗಳಿಗೆ ಉದ್ದರಿ ಖಾತರಿ ನ್ಯಾಸ [CGTMSE: Credit Guarantee Trust for Micro and Small Enterprises] ಎಂಬ ಸಂಸ್ಥೆಯನ್ನು ಸ್ಥಾಪಿಸಿ ಆ ಮೂಲಕ ಸಣ್ಣ ಉದ್ಯಮಗಳಿಗೆ ನೆರವಾಗುವಂತೆ ಬ್ಯಾಂಕುಗಳಿಗೆ ಉದ್ದರಿ ಖಾತರಿ ನೀಡಲಾಗುತ್ತಿದೆ.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ನ್ಯೂಯಾರ್ಕ್ ನಗರದ ಪಾರ್ಕ್ ಅವೆನ್ಯೂನಲ್ಲಿರುವ 'ಗ್ರಾಂಡ್ ಸೆಂಟ್ರಲ್ ಟರ್ಮಿನಲ್' ಎಂಬುದು**

ಎ) ದೊಡ್ಡ ವಿಮಾನ ನಿಲ್ದಾಣ

ಬಿ) ದೊಡ್ಡ ರೈಲು ನಿಲ್ದಾಣ

ಸಿ) ಎತ್ತರದ ರೈಲು ನಿಲ್ದಾಣ

ಡಿ) ಎತ್ತರದ ವಿಮಾನ ನಿಲ್ದಾಣ

**2. ಭಾರತದ ಅತಿದೊಡ್ಡ ಜಲಪಾತ ಯಾವುದು?**

ಎ) ಗೇರುಸೊಪ್ಪೆ ಜಲಪಾತ

ಬಿ) ನಯಾಗರ ಜಲಪಾತ

ಸಿ) ಅಬ್ಬೆ ಜಲಪಾತ

ಡಿ) ದೂಧ್ ಗಂಗಾ ಜಲಪಾತ

**3. ಭಾರತದಲ್ಲಿ ಇಂಜಿನಿಯರುಗಳ ದಿನಾಚರಣೆಯನ್ನು ಆಚರಿಸುವ ದಿನ __________**

ಎ) 5 ಸೆಪ್ಟೆಂಬರ್

ಬಿ) 15 ಫೆಬ್ರುವರಿ

ಸಿ) 5 ಅಕ್ಟೋಬರ್

ಡಿ) 15 ಸೆಪ್ಟೆಂಬರ್

**4. ಶ್ರೀ ಆದಿ ಶಂಕರಾಚಾರ್ಯರು ಈ ಕ್ಷೇತ್ರಕ್ಕೆ ಅಮೂಲ್ಯ ಕಾಣಿಕೆ ಸಲ್ಲಿಸಿದರು __________**

ಎ) ದ್ವೈತ ಸಿದ್ಧಾಂತ

ಬಿ) ಶಿಲ್ಪಕಲೆ

ಸಿ) ಅದ್ವೈತ ಸಿದ್ಧಾಂತ

ಡಿ) ಚಿತ್ರಕಲೆ

**5. 'ದಿ ಲಾಸ್ಟ್ ಸಪ್ಪರ್' ಎಂಬ ಕಲಾಕೃತಿಯನ್ನು ರಚಿಸಿದವರು __________**

ಎ) ಮೈಕೇಲ್ ಏಂಜಲೋ

ಬಿ) ಹರ್ಮನ್ ಹೆಸ್

ಸಿ) ಲಿಯೊನಾರ್ಡ್ ಡಾ ವಿಂಚಿ

ಡಿ) ಜೇಮ್ಸ್ ಹ್ಯಾಡ್ಲಿ ಚೇಸ್

**6. ಮೌನಾ ಲೋವಾ ಎಂಬ ಹೆಸರಿನ ದೊಡ್ಡ ಜ್ವಾಲಾಮುಖಿ ಎಲ್ಲಿದೆ?**

ಎ) ಜಪಾನ್

ಬಿ) ಹವಾಯ್ ದ್ವೀಪ

ಸಿ) ಫಿಲಿಪೈನ್ಸ್

ಡಿ) ಬರ್ಮುಡಾ

**7. ದಕ್ಷಿಣ ಭಾರತದ ಅತ್ಯಂತ ದೊಡ್ಡ ನದಿ __________**

ಎ) ಗೋದಾವರಿ

ಬಿ) ಕೃಷ್ಣಾ

ಸಿ) ಕಾವೇರಿ

ಡಿ) ತಪತಿ

**8. ಸಾಂಪ್ರದಾಯಿಕ ಭಾರತೀಯ ನಂಬಿಕೆಯಂತೆ _______ ಸಾಗರಗಳು ಮತ್ತು _______ ಲೋಕಗಳು ಇವೆ.**

ಎ) 5, 3

ಬಿ) 7, 14

ಸಿ) 2, 8

ಡಿ) 3, 9

**9. ಭಾರತದಲ್ಲಿ ಸತಿ ಸಹಗಮನ ಪದ್ಧತಿಯನ್ನು ಕಾನೂನುಬಾಹಿರ ಮತ್ತು ಶಿಕ್ಷಾರ್ಹ ಎಂದು ಘೋಷಿಸಿದ್ದು**

ಎ) ರಾಜಾ ರಾಮ ಮೋಹನ ರಾಯ್

ಬಿ) ಲಾರ್ಡ್ ರಿಪ್ಪನ್

ಸಿ) ಆರ್ಯ ಸಮಾಜ

ಡಿ) ವಿಲಿಯಂ ಬೆಂಟಿಂಕ್

**10. ಸ್ವಾಮಿ ವಿವೇಕಾನಂದರು ತಮ್ಮ ಪ್ರಸಿದ್ಧ ಭಾಷಣ ಮಾಡಿದ 'ವಿಶ್ವ ಧರ್ಮ ಸಮ್ಮೇಳನ' ನಡೆದದ್ದು ಎಲ್ಲಿ?**

ಎ) ಲಾಸ್ ಏಂಜಲೀಸ್

ಬಿ) ಲಾಸ್ ವೇಗಾಸ್

ಸಿ) ಶಿಕಾಗೋ

ಡಿ) ಬರ್ಲಿನ್

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

1 -C , 2 -C , 3 –D , 4 –B, 5 – D, 6 – C, 7 – C, 8 – D, 9 –D , 10 – D